www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–06 ಜುಲೈ 2015
Volume : IX Issue : 07 July 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಪ್ರಾರ್ಥನಾ ಮನವಿಗಳು
3. ಸಾಕ್ಷಿಯ ಸ್ವರ
4. ಪ್ರಧಾನ ಬೋಧನೆಯ ನಾಲ್ಕು ಭಾಗಗಳು !
5. ಭಕ್ತರ ಹೇಳಿಕೆಗಳು
6. ಸ್ಥಳೀಯ ಮತ್ತು ವಿದೇಶ ಸುದ್ದಿ
7. ಆರೋಗ್ಯ ಸ್ವರ
8. ನೀತಿವಂತನ ಆಶೀರ್ವಾದಗಳು
9. ಡಿಜಿಎಮ್ ಬೇತೇಲ್ ಅಂಕಣ
10. ಆಂತರ್ಯದ ಸೌಂದರ್ಯ
11. ಮಹಿಳೆಯರ ಸ್ವರ
12. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯ ಸಹೋದರ/ ಸಹೋದರಿಯರೆಲ್ಲರಿಗೂ ನನ್ನ ವಂದನೆಗಳು. ಕಳೆದ 6 ತಿಂಗಳಲ್ಲಿ ಕರ್ತನ ಪ್ರಸನ್ನತೆ, ನಡೆಸುವಿಕೆ, ಪ್ರೋತ್ಸಾಹ, ಪ್ರೀತಿಯನ್ನು ನಾವು ರುಚಿಸಿ ನೋಡಿರುತ್ತೇವೆ. ಕೀರ್ತ. 34:8 ರಲ್ಲಿ ಹೇಳುತ್ತದೆ, ಯೆಹೋವನು ಸರ್ವೋತ್ತಮನೆಂದು ಅನುಭವ ಸವಿದು ನೋಡಿರಿ. ಮುಂದಿನ ದಿವಸಗಳಲ್ಲಿ ಉನ್ನತವಾದ ಆತ್ಮೀಯ ದರ್ಶನದೊಂದಿಗೆ ನಾವು ಮುಂದುವರಿಯೋಣ. ಜ್ಞಾನೋ. 29:18 ಹೇಳುತ್ತದೆ, **'ದೇವದರ್ಶಕರಿಲ್ಲದಿರುವಲ್ಲಿ ಜನರು ಅಂಕೆಮೀರಿ ನಡೆಯುವರು'**. ನಮಗೊಂದು ಆತ್ಮೀಯವಾದ ದರ್ಶನವು ಅತ್ಯವಶ್ಯಕವಾಗಿ ಬೇಕಾಗಿದೆ. ಕರ್ತನು ನಮ್ಮೆಲ್ಲರನ್ನು ಉಪಯೋಗಿಸಲು ಇಷ್ಟವುಳ್ಳವನಾಗಿದ್ದಾನೆ. ನಾವು ದರ್ಶನ ಹೊಂದಿ ಅದಕ್ಕಾಗಿ ಸಿದ್ಧರಾಗಬೇಕಾಗಿದೆ.

1 ಸಮು. 3:1–10 ವಾಕ್ಯದಲ್ಲಿ ಚಿಕ್ಕ ಸಮುವೇಲನು ಕರ್ತನ ಸ್ವರ ಕೇಳಲು ತನ್ನನ್ನೇ ಸಿದ್ಧಪಡಿಸಿಕೊಂಡನು. 1 ಸಮು. 3:19–21 ಹೇಳುತ್ತದೆ, ದಾನಿನಿಂದ ಬೇರ್ಷೆಬದವರೆಗೆ ಕರ್ತನು ಅವನನ್ನು ಪ್ರಸಿದ್ಧವಾದ ಪ್ರವಾದಿಯನ್ನಾಗಿ ಮಾರ್ಪಡಿಸಿದನು. ಪ್ರವಾದಿಯಾದ ಎಲೀಷನು ದ್ವಿಗುಣವಾದ ಅಭಿಷೇಕ ಹೊಂದಿಕೊಳ್ಳಲು ತನ್ನನ್ನೇ ತಾನು ಸಿದ್ಧಪಡಿಸಿಕೊಂಡನು. ಅದಕ್ಕಾಗಿ ಗಿಲ್ಗಾಲ್, ಬೇತೇಲ್, ಯೆರಿಕೋ, ಯೋರ್ದಾನ್ ಹೀಗೆ ಎಲ್ಲಾ ಕಡೆಗಳಲ್ಲಿಯೂ ತನ್ನ ನಾಯಕನಾದ ಪ್ರವಾದಿ ಎಲೀಯನನ್ನು ಬಿಡದೆ ಹಿಂಬಾಲಿಸಿದನು. 2 ಅರಸು. 2–9–15 ದ್ವಿಗುಣವಾದ ಅಭಿಷೇಕವನ್ನು ಆತನು ಹೊಂದಿಕೊಂಡನು. ಪ್ರಿಯ ದೇವ ಜನರೇ, ಕರ್ತನು ನಿಮ್ಮನ್ನು ಹಿಂದಿನ ದಿವಸಗಳಲ್ಲಿ ನಡೆಸಿದಕ್ಕಿಂತಲೂ ಮುಂದಿನ ದಿವಸಗಳಲ್ಲಿ ಶಕ್ತವಾಗಿ ಉಪಯೋಗಿಸಲು ಇಷ್ಟವುಳ್ಳವನಾಗಿದ್ದಾನೆ ಅದಕ್ಕಾಗಿ ಆತ್ಮೀಯ ದರ್ಶನದೊಂದಿಗೆ ಕರ್ತನ ಮುಂದೆ ಸಿದ್ಧರಾಗಿರಿ. **"ಏಳು ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು"** (ಯೆಶಾ. 60:1–2). ಕರ್ತನು ನಿಮ್ಮನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) 4 ಕಡೆ ಸತ್ಯವೇದದಲ್ಲಿ ಕ್ರೈಸ್ತ ಎಂದು ಬರೆದಿರುವ ವಚನವು 1 ಪೇತ್ರ. 3:16 ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ. ಕರ್ತನಾದ ಯೇಸುಕ್ರಿಸ್ತನು ಮತ್ತಾ. 5:11–12 ರಲ್ಲಿ 3 ಪ್ರಧಾನ ವಿಷಯಗಳನ್ನು ಹೇಳಿದ್ದಾನೆ.

1) ನನ್ನ ನಿಮಿತ್ತ (ಕ್ರಿಸ್ತನ ನಿಮಿತ್ತ) ನಿಮ್ಮನ್ನು ನಿಂದಿಸುತ್ತಾರೆ.

2) ಹಿಂಸೆಪಡಿಸುತ್ತಾರೆ.

3) ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸುತ್ತಾರೆ.

ಇಂದು ಲೋಕದಲ್ಲಿ ತಪ್ಪು ಕೆಲಸ ಮಾಡುವವರನ್ನು ನಿಂದಿಸುವುದಕ್ಕಿಂತಲೂ ತಪ್ಪಾದ ಸಂಗತಿಗಳನ್ನು ಬಿಟ್ಟು ಒಳ್ಳೆಯವರಾಗಿ ಜೀವಿಸುವವರನ್ನು ನಿಂದಿಸಿ ದೂಷಿಸುವ ಅನೇಕ ಜನರನ್ನು ಲೋಕದಲ್ಲಿ ಕಾಣಬಹುದು. ಇಂದು ಕ್ರಿಸ್ತನನ್ನು ಅಂಗೀಕರಿಸಿ ಆತನ ಮಾರ್ಗದಲ್ಲಿ ನೀನು ನಡೆಯುವಾಗ ಲೋಕ ನಿನ್ನನ್ನು ನಿಂದಿಸುತ್ತದೆ.

**"ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ. ಯಾಕಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದ ವಶದಿಂದ ತಪ್ಪಿಸಿಕೊಂಡವನಾಗಿ ಉಳಿದಿರುವ ತನ್ನ ಜೀವಮಾನ ಕಾಲದಲ್ಲಿ ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನ ಮಾಡುವನು. ನೀವು ಬಂಡುತನ ದುರಾಶೆ ಕುಡಿಕತನ ದುಂದೌತನ ಮದ್ಯಪಾನಗೋಷ್ಠಿ ಅಸಹ್ಯವಾದ ವಿಗ್ರಹಾರಾಧನೆ ಈ ಮೊದಲಾದವುಗಳನ್ನು ನಡಿಸುವದರಲ್ಲಿಯೂ ಅನ್ಯಜನರಿಗೆ ಇಷ್ಟವಾದ ದುಷ್ಕೃತ್ಯಗಳನ್ನು ಮಾಡುವದರಲ್ಲಿಯೂ ಕಳೆದುಹೋದ ಕಾಲವೇ ಸಾಕು. ತಾವು ಮಾಡುವ ಅಪರಿಮಿತವಾದ ಪಟಿಂಗತನದಲ್ಲಿ ನೀವು ಸೇರದೆ ಇದ್ದದ್ದಕ್ಕೆ ಅವರು ಆಶ್ಚರ್ಯಪಟ್ಟು ನಿಮ್ಮನ್ನು ದೂಷಿಸುತ್ತಾರೆ"** (1 ಪೇತ್ರ. 4:1–4).

ನಿಂದಿಸುವುದು, ದೂಷಿಸುವುದಕ್ಕೆ ಕಾರಣ ಮೇಲಿನ ವಾಕ್ಯದಲ್ಲಿವೆ. ಅವರು ಮಾಡುವಂತಹ ದೇವರ ವಾಕ್ಯಕ್ಕೆ ವಿರುದ್ಧವಾದ ಸಂಗತಿಗಳನ್ನು ನಾವು ಮಾಡದಿದ್ದರೆ ದೂಷಿಸುತ್ತಾರೆ ಮತ್ತು ನಿಂದಿಸುತ್ತಾರೆ. ಉದಾ: ವಿಗ್ರಹಾರಾಧನೆ, ಕುಡಿಕತನ, ವ್ಯಭಿಚಾರ, ಅಕ್ರಮ ಹಣ ಸಂಪಾದನೆ. ಜನರು ನಿಮ್ಮನ್ನು ಕ್ರಿಸ್ತನ ನಿಮಿತ್ತ ನಿಂದಿಸಿದರೆ ನೀವು ಧನ್ಯರು ಎಂದು ಸತ್ಯವೇದ ಹೇಳುತ್ತದೆ, ಪರಲೋಕದಲ್ಲಿ ನಿಮಗೆ ಪ್ರತಿಫಲ ಇದೆ.

1) **ಹಿಂಸೆಪಡಿಸುತ್ತಾರೆ** :– ಯೇಸುವನ್ನು ಅಂಗೀಕರಿಸಿದಾಗ ಕೆಲವರನ್ನು ಮನೆಯಿಂದ ಹೊರಗಡೆ ಹಾಕುತ್ತಾರೆ, ಕೆಲವರನ್ನು ಕೆಲಸದಿಂದ ತೆಗೆಯುತ್ತಾರೆ. ಕೆಲವರನ್ನು ದೂರ ಮಾಡುತ್ತಾರೆ, ಕೆಲವರನ್ನು ನಿಂದಿಸುತ್ತಾರೆ, ಕೆಲವರನ್ನು ಅವಮಾನ ಪಡಿಸುತ್ತಾರೆ. ಸತ್ಯವೇದದಲ್ಲಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಿಮಿತ್ತ ಹಿಂಸೆಗೆ ಒಳಗಾದಂತಹ ಅನೇಕ ಜನರನ್ನು ನಾವು ಕಾಣಬಹುದು ಆದರೆ ಅವರೆಲ್ಲರೂ ಮರಣದವರೆಗೂ ನಂಬಿಗಸ್ತರಾಗಿ ನಂಬಿಕೆಗಾಗಿ ನಿಂತು ನಂಬಿಕೆಗಾಗಿ ಸತ್ತಿರುವುದನ್ನು ಕಾಣಬಹುದು. ಯೇಸು ಯೋಹಾ. 15:18–19 ರಲ್ಲಿ **"ಲೋಕವು ನಿಮ್ಮ ಮೇಲೆ ದ್ವೇಷ ಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು; ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ"** ಅ.ಕೃ. 7:51–60 ರಲ್ಲಿ ಭಕ್ತನಾದ ಸ್ತೆಫನ ಸೇವೆ ಮತ್ತು ಅವಸಾನವನ್ನು ಕಾಣುತ್ತೇವೆ. **"ಚಂಡಿಗಳೇ, ಮನಶ್ಶುದ್ಧಿಯೂ ಕರ್ಣಶುದ್ಧಿಯೂ ಇಲ್ಲದವರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವೂ ಯಾವಾಗಲೂ ಪವಿತ್ರಾತ್ಮನನ್ನು ಎದುರಿಸುವವರಾಗಿದ್ದೀರಿ. ಪ್ರವಾದಿಗಳಲ್ಲಿ ನಿಮ್ಮ ಪಿತೃಗಳು ಹಿಂಸೆಪಡಿಸದವರು ಯಾರಿದ್ದಾರೆ? ಅವರು ಆ ನೀತಿಸ್ವರೂಪನ ಆಗಮನದ ವಿಷಯದಲ್ಲಿ ಮುಂತಿಳಿಸಿದವರನ್ನು ಕೊಂದರು, ನೀವು ಈಗ ಆತನನ್ನು ಹಿಡುಕೊಟ್ಟು ಕೊಂದವರಾದಿರಿ. ದೇವದೂತರ ಮೂಲಕ ನೇಮಕವಾದ ಧರ್ಮಶಾಸ್ತ್ರವನ್ನು ನೀವು ಹೊಂದಿದವರಾದರೂ ಅದನ್ನು ಅನುಸರಿಸುವದಿಲ್ಲ ಎಂದು ಹೇಳಿದನು"** (ಅ.ಕೃ. 7:51–53). ಮೇಲಿನ ವಚನಗಳಲ್ಲಿ ಸ್ತೆಫನನು ಮುಖದಾಕ್ಷಿಣ್ಯ ನೋಡದೆ ಕರ್ಣಶುದ್ಧಿಯೂ

ಉನ್ನತ ಲೋಕದಿಂದ ದಿವ್ಯಾತ್ಮಧಾರೆಯು ನಮ್ಮ ಮೇಲೆ ಸುರಿಸಲ್ಪಡುವದು;
ಆಗ ಅರಣ್ಯವು ತೋಟವಾಗುವದು (ಯೆಶಾ. ೩೨:೧೫).

ಇಲ್ಲದವರೇ ಅಂದರೆ ಹೃದಯದಲ್ಲಿ ಮಾನಸಾಂತರ, ಜೀವಿತದಲ್ಲಿ ಪರಿವರ್ತನೆ ಇಲ್ಲದೆ ದೇವರ ವಾಕ್ಯಕ್ಕೆ ಕಿವಿಗೊಡದವರು ಎಂದು ಅರ್ಥ. ಸ್ತೆಫನನ ಮೂಲಕ ದೇವರ ವಾಕ್ಯವನ್ನು ಕೇಳಿದಂತಹ ಯೆಹೂದ್ಯರಲ್ಲಿ ಮಾನಸಾಂತರ ಬರುವುದಕ್ಕೆ ಬದಲಾಗಿ ಅವರು ಕೋಪಾವೇಶವುಳ್ಳವರಾಗಿ ಬದಲಾಗುವುದನ್ನು ಕಾಣುತ್ತೇವೆ. ಇಂದು ಅನೇಕರಿಗೆ ದೇವರ ವಾಕ್ಯ ಹೇಳುವಾಗ ನಂಬದೆ, ಅಂಗೀಕರಿಸದೆ, ಮಾನಸಾಂತರಪಡದೆ, ದೇವಜನರನ್ನು ಮತ್ತು ದೇವ ಸೇವಕರನ್ನು ಹಿಂಸಿಸುವುದನ್ನು ಲೋಕದಲ್ಲಿ ಕಾಣಬಹುದಾಗಿದೆ. **"ಈ ಮಾತುಗಳನ್ನು ಕೇಳಿ ಅವರು ರೌದ್ರ ಮನಸ್ಸುಳ್ಳವರಾಗಿ ಅವನ ಮೇಲೆ ಹಲ್ಲು ಕಡಿದರು. ಆದರೆ ಅವನು ಪವಿತ್ರಾತ್ಮ ಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನೂ ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನೂ ಕಂಡು ಅಗೋ, ಆಕಾಶವು ತೆರೆದಿರುವುದನ್ನೂ ಮನುಷ್ಯಕುಮಾರನು ದೇವರ ಬಲಗಡೆಯಲ್ಲಿ ನಿಂತಿರುವುದನ್ನೂ ನೋಡುತ್ತೇನೆ ಎಂದು ಹೇಳಿದನು"** (ಅ.ಕೃ. 7:54–60). ಮೇಲಿನ ವಚನಗಳಲ್ಲಿ ಸ್ತೆಫನನಿಗೆ ವಿರುದ್ಧವಾಗಿ ನಿಂತು ಹಲ್ಲು ಕಡಿಯುವಂತಹ ಜನರ ಗುಂಪನ್ನು ಕಾಣುತ್ತೇವೆ. ಸ್ತೆಫನನಿಗೆ ಅದು ಸಮಸ್ಯೆಯಲ್ಲ, ಕಾರಣ ಅವನ ದೃಷ್ಟಿ ಪರಲೋಕದ ಕಡೆಗಿದೆ. ಪ್ರಿಯ ದೇವ ಜನರೇ, ನೀನು ಯೇಸು ಕ್ರಿಸ್ತನನ್ನು ನಂಬಿದ ನಿಮಿತ್ತವಾಗಿ ಅಥವಾ ಯೇಸುಕ್ರಿಸ್ತನ ವಚನ ಸಾರುವ ನಿಮಿತ್ತವಾಗಿ ಅನೇಕ ವಿಧವಾದ ಗುಂಪು ಗುಂಪು ಜನರು ನಿನಗೆ ಎದುರಾಗಿ ಬಂದು ಹಲ್ಲು ಕಡಿದು ನಿಲ್ಲುವುದಾದರೆ ನೀನು ಭಯಪಡುವ ಅವಶ್ಯವಿಲ್ಲ, ಎಲ್ಲಾ ಸಮಯಗಳಲ್ಲಿ ನಿನ್ನ ದೃಷ್ಟಿ ಪರಲೋಕದ ಕಡೆಗಿರಲಿ. ಆಗ ನೀನು ಹಿಂಸೆಯ ಮಧ್ಯದಲ್ಲಿ ದರ್ಶನವನ್ನು ಕಾಣುವ ದೈವ ಸಾನಿಧ್ಯವನ್ನು ಅನುಭವಿಸುವಿ. **"ದೇವರು ನಮಗೆ ಆಶ್ರಯ ದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು. ಆದದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿ ಹೋದರೂ ನಮಗೇನೂ ಭಯವಿಲ್ಲ. ಸಮುದ್ರವು ಘೋಷಿಸುತ್ತಾ ನೊರೆಯನ್ನು ಕಾರಿದರೇನು? ಅದರ ಅಲ್ಲಕಲ್ಲೋಲಗಳಿಂದ ಪರ್ವತಗಳು ಚಲಿಸಿದರೇನು?"** (ಕೀರ್ತ. 46:1–3). ನಿನ್ನನ್ನು ಹಿಂಸೆಪಡಿಸಲು ನಿಂತಿರುವ ಬಂಧುಗಳನ್ನೋ, ಸ್ನೇಹಿತರನ್ನೋ, ಜನರ ಗುಂಪನ್ನೋ ನೋಡಿ ಭಯಪಡಬೇಡ, ಪರಲೋಕವನ್ನು ನೋಡಿ ಬಲಹೊಂದಿಕೋ. ಎಂಥ ಪರಿಸ್ಥಿತಿಯಲ್ಲಿ ಕೂಡ ನಿನ್ನ ದೃಷ್ಟಿ ಪರಲೋಕದ ಮೇಲೆ ಇರಬೇಕು. **"ಆದರೆ ಅವರು ಮಹಾಶಬ್ಧದಿಂದ ಕೂಗಿ ಕಿವಿಗಳನ್ನು ಮುಚ್ಚಿಕೊಂಡು ಒಟ್ಟಾಗಿ ಅವನ ಮೇಲೆ ಬಿದ್ದು ಅವನನ್ನು ಊರ ಹೊರಕ್ಕೆ ನೂಕಿಕೊಂಡು ಹೋಗಿ ಕೊಲ್ಲುವದಕ್ಕೆ ಕಲ್ಲೆಸೆದರು. ಸಾಕ್ಷಿಯವರು ತಮ್ಮ ಬಟ್ಟೆಗಳನ್ನು ತೆಗೆದು ಸೌಲನೆಂಬ ಒಬ್ಬ ಯೌವನಸ್ಥನ ಕಾಲುಗಳ ಬಳಿಯಲ್ಲಿ ಇಟ್ಟರು. ಅವರು ಸ್ತೆಫನನ ಮೇಲೆ ಕಲ್ಲೆಸೆಯುತ್ತಾ ಇರಲು ಅವನು ಕರ್ತನ ಹೆಸರನ್ನು ಹೇಳಿ ಯೇಸುಸ್ವಾಮಿಯೇ, ನನ್ನಾತ್ಮವನ್ನು ಸೇರಿಸಿಕೋ ಎಂದು ಪ್ರಾರ್ಥಿಸಿ ಮೊಣಕಾಲೂರಿ ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸಬೇಡವೆಂದು ಮಹಾಶಬ್ಧದಿಂದ ಕೂಗಿದನು"** (ಅ.ಕೃ. 7:57–60 ). ಒಂದು ಕಡೆ ಜನರಿಗೆ ದೇವರ ವಾಕ್ಯ ಹೇಳಿ ವಿರೋಧದ ಮಧ್ಯದಲ್ಲಿ ಪರಲೋಕದ ದರ್ಶನ ನೋಡಿ ನಿಂತಂತಹ ಸ್ತೆಫನನನ್ನು ಕಾಣುತ್ತೇವೆ. ಇನ್ನೊಂದು ಬದಿಯಲ್ಲಿ ಸ್ತೆಫನನಿಗೆ ವಿರೋಧವಾಗಿ ಕಲ್ಲುಗಳನ್ನು ತೆಗೆದುಕೊಂಡು ಹಿಂಸಿಸಿ ಸಾಯಿಸುವಂತಹ ಸ್ತೆಫನನ್ನು ಕಾಣುತ್ತೇವೆ. ಸ್ತೆಫನನು ಹಿಂಸೆಯ ಸಮಯದಲ್ಲಿ ಪರಲೋಕವನ್ನು ನೋಡಿದ್ದು ಮಾತ್ರವಲ್ಲ, ತನ್ನ ಆತ್ಮವನ್ನು ಕರ್ತನಾದ ಯೇಸುವಿಗೆ ಒಪ್ಪಿಸಿ ಕಲ್ಲೆಸೆದು ಕೊಲ್ಲುವಂತಹ ಜನರಿಗಾಗಿ ಪ್ರಾರ್ಥಿಸಿದನು. ದೇವ ಜನರೇ, ಇಂದು ನಂಬಿಕೆಯ ನಿಮಿತ್ತವಾಗಿ ಅನೇಕರು ನಿನಗೆ ವಿರುದ್ಧವಾಗಿ ನಿಂತು ಹಿಂಸಿಸುವ ಜನರನ್ನು ನೋಡಿ ನೀನು ಭಯ ಪಡಬೇಡ ನಿನ್ನನ್ನು ರಕ್ಷಿಸಿ ನಡೆಸುವ ಕರ್ತನು ಇಂದಿಗೂ ಕೂಡ ಜೀವಿಸುತ್ತಾ ಇದ್ದಾನೆ.

2) **ಮಾನುಷಿಕ ಪೂರ್ಣತೆ :– 'ಸಾಯುವ ಹಾಗಿದ್ದ ಉಳಿದವುಗಳನ್ನು ದೃಢಪಡಿಸು'** (ಪ್ರಕ. 3:2). ಕ್ರಿಸ್ತೀಯ ಜೀವಿತವೆಂಬುದು ನಿರೀಕ್ಷೆಯ ಜೀವಿತವಾಗಿದೆ. ಒಂದು ವೇಳೆ ಒಬ್ಬ ಕ್ರೈಸ್ತ ವಿಶ್ವಾಸಿ ಪಾಪದಲ್ಲಿ ಬಿದ್ದರೂ ಮಾನಸಾಂತರಪಟ್ಟು ಕರ್ತನಲ್ಲಿ ಕ್ಷಮೆ ಕೇಳುವಾಗ ಕರ್ತನು ಅವನನ್ನು ಕ್ಷಮಿಸಿ ಶುದ್ಧೀಕರಿಸಿ ಪುನ: ತನ್ನ ಶಕ್ತವಾದ ಮಹಿಮೆಯ ಪಾತ್ರೆಯನ್ನಾಗಿ ಉಪಯೋಗಿಸುತ್ತಾನೆ. ಇಂದು ನೀನು ಒಂದು ವೇಳೆ ಪಾಪದಲ್ಲಿ ಬಿದ್ದು ನಿರಾಶೆಯಲ್ಲಿ ಜೀವನ ಮಾಡುವಂತಹ ವ್ಯಕ್ತಿಯಾಗಿರಬಹುದು ಅಥವಾ ಪ್ರಾರ್ಥನಾ ಜೀವಿತ ಕಳಕೊಂಡು, ಪರಿಶುದ್ಧತೆ ಕಳಕೊಂಡು, ಮನಸ್ಸಾಕ್ಷಿ ಚುಚ್ಚಲ್ಪಡುವಂತಹ ಅವಸ್ಥೆಯಲ್ಲಿ ಜೀವನ

ಯೆಹೋವನು ತಾನೇ ನಿನ್ನ ಮುಂದುಗಡೆ ಹೋಗುವನು; ಆತನೇ ನಿನ್ನ ಸಂಗಡ ಇರುವನು; ನಿನ್ನನ್ನು ಅಪಜಯಕ್ಕೆ ಗುರಿಪಡಿಸುವದೇ ಇಲ್ಲ, ಕೈ ಬಿಡುವದಿಲ್ಲ; ಅಂಜಬೇಡ, ಧೈರ್ಯದಿಂದಿರು (ಧರ್ಮೋ. 31:8).

ಮಾಡುತ್ತಿರಬಹುದು. ನಿನಗೆ ಇನ್ನೂ ನಿರೀಕ್ಷೆಯಿದೆ ಪುನ: ಕ್ರಿಸ್ತೀಯ ಜೀವಿತದಲ್ಲಿ ಹೊಸ ಆರಂಭವನ್ನು ನೀನು ಮಾಡಬಹುದು. ಕರ್ತನಾದ ಯೇಸುಕ್ರಿಸ್ತನು ನಿನ್ನೊಂದಿಗಿದ್ದು ನಿನ್ನನ್ನು ನಡೆಸಲು ಶಕ್ತನಾಗಿದ್ದಾನೆ ಸೋತು ಹೋಗಬೇಡ, ನಿರಾಶನಾಗಬೇಡ, ನಿರೀಕ್ಷೆ ಕಳಕೊಳ್ಳಬೇಡ. **"ಒಂದು ಕಾಲ ಉಂಟು ನಿನ್ನ ನಿರೀಕ್ಷೆಯು ನಿರರ್ಥಕವಾಗದು'**. (ಜ್ಞಾನೋ. 23:18). ನಿನ್ನ ಜೀವಿತದಲ್ಲಿ ಎಲ್ಲವನ್ನು ಕಳಕೊಂಡೆ ಎಂಬ ಅನುಭವದಲ್ಲಿ ಜೀವಿಸುತ್ತಿದ್ದರೂ ಕರ್ತನು ಕಳಕೊಂಡ ಎಲ್ಲವನ್ನೂ ತಿರುಗಿ ನಿನಗೆ ದಯಪಾಲಿಸಿ ಕೊಡುವನು. ಕರ್ತನ ಬಳಿಗೆ ಬೇಗನೆ ಓಡಿ ಬಾ, ಆತನು ನಿನ್ನನ್ನು ಪ್ರೀತಿಸುತ್ತಾನೆ.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

# ಸಾಕ್ಷಿಯ ಸ್ವರ

ನಾನು 1 1/2 ವರ್ಷದಿಂದ ಅನಾರೋಗ್ಯ ಪೀಡಿತಳಾಗಿದೆ. ಟೈಪಾಯ್ಡ್ ಜ್ವರ ಬಂದಿತ್ತು. ಹೊಟ್ಟೆಯಲ್ಲಿ ಗೆಡ್ಡೆಯಿತ್ತು. ನಡೆಯಲಿಕ್ಕೆ ಹಾಗೂ ಕೆಲಸ ಮಾಡಲಿಕ್ಕೆ ಆಗುತ್ತಿರಲಿಲ್ಲ ತುಂಬಾ ಸುಸ್ತು ಆಗುತ್ತಿತ್ತು ಕರ್ತನು ಇದೆಲ್ಲದರಿಂದ ನನಗೆ 10ನೇ ಕೆರೀತ್ ಕೂಟದಲ್ಲಿ ಬಿಡುಗಡೆ ಕೊಟ್ಟಿದ್ದಾನೆ. ದೇವರು ಮಾಡಿದ ಅದ್ಭುತಕ್ಕಾಗಿ ದೇವರಿಗೆ ಸ್ತೋತ್ರ. **"ಅವನು ಅಸ್ವಸ್ಥನಾಗಿ ಬಿದ್ದು ಕೊಂಡಿರುವಾಗ ಯೆಹೋವನು ಅವನನ್ನು ಉದ್ಧರಿಸುವನು; ಅವನ ರೋಗವನ್ನೆಲ್ಲಾ ಪರಿಹರಿಸಿ ಆರೋಗ್ಯವನ್ನುಂಟುಮಾಡಿದಿಯಲ್ಲಾ"** (ಕೀರ್ತ. 41:3).

**ಸಹೋ॥ ಗಿರಿಜಾ, ಜಾವಳಿ.**

ನನ್ನ ಮಕ್ಕಳು ಬದಲಾಗಬೇಕು, ದೇವರ ಮಹಿಮೆಯನ್ನು ಕಾಣಬೇಕು, ವಾಕ್ಯದಲ್ಲಿ ಬಲಹೊಂದಬೇಕು ಎಂಬ ಉದ್ದೇಶದಿಂದ ಈ ಕೂಟಕ್ಕೆ ನಾನು ಬಂದಿದ್ದೆ, ಅದೇ ರೀತಿ ದೇವರು ಈ ಕೂಟದಲ್ಲಿ ನನ್ನ ಮಗಳು ದೇವರ ಶಕ್ತಿಯನ್ನು ಅತ್ಯಧಿಕವಾಗಿ ಹೊಂದಿಕೊಂಡು ವಾಕ್ಯವನ್ನು ಕೇಳಿ ದೀಕ್ಷಾಸ್ನಾನ ತೆಗೆದುಕೊಳ್ಳುವಂತೆ ಆತ್ಮನು ಈ ಕೂಟದ ಮೂಲಕ ನಡೆಸಿದನು ಹಾಗೂ ನಾನು ಅನೇಕ ವಿಷಯದಲ್ಲಿ ಕುಗ್ಗಿ ಹೋಗಿದ್ದೆ ವಾಕ್ಯವನ್ನು ಕೇಳಿದ ನಂತರ ಉತ್ತೇಜವಾಯಿತು, ಪವಿತ್ರಾತ್ಮನ ಶಕ್ತಿಯಿಂದ ಹೆಚ್ಚಾಗಿ ಕರ್ತನು ತುಂಬಿಸಿದ್ದಾನೆ ಅದಕ್ಕಾಗಿ ದೇವರಿಗೆ ಸ್ತೋತ್ರ. **"ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ"** (ಯೋಹಾ. 11:41).

**ಸಹೋ॥ ಲೀಲಾ ಡಿ'ಸೋಜಾ, ಮಂಗಳೂರು.**

ನಾನು 10ನೇ ಕೆರೀತ್ ಕೂಟಕ್ಕೆ ಬರುವುದಕ್ಕೆ ಮುಂಚೆ ಅನೇಕ ಸಮಸ್ಯೆಯಿಂದ ನೊಂದ ಹೃದಯದಿಂದ ಬಂದಿದ್ದೆ ಆದರೆ ಈ ಎಲ್ಲಾ ಸಮಸ್ಯೆಗಳಿಗೆ ಕರ್ತನು ಉತ್ತರಿಸಿದ್ದಾನೆ ಮತ್ತು ಬಿಡುಗಡೆ ಕೊಟ್ಟಿದ್ದಾನೆ ಮತ್ತು ಕರ್ತನನ್ನು ಇನ್ನು ಆಳವಾಗಿ ಪ್ರೀತಿಸುವುದಕ್ಕೆ ಆತನ ಜೊತೆಯಲ್ಲಿ ಹೆಚ್ಚಿನ ಸಮಯವನ್ನು ಕಳೆಯುವುದಕ್ಕೆ ಸಹಾಯ ಮಾಡಿದ್ದಾನೆ ಹಾಗೂ ದೇವರ ವಾಕ್ಯದ ಮೂಲಕ ಬಲವಾಗಿ ಕಾರ್ಯ ಮಾಡಿದ್ದಾನೆ ಮತ್ತು ಆತ್ಮನ ವರಗಳಿಂದ ತುಂಬಿಸಿದ್ದಾನೆ. ಕರ್ತನ ನಾಮಕ್ಕೆ ಸ್ತೋತ್ರ. **"ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು; ಆತನು ನಿನ್ನನ್ನು ಉದ್ಧಾರಮಾಡುವನು"** (ಕೀರ್ತ. 55:22).

**ಸಹೋ॥ ಲೋಕೇಶ್, ಜಾವಳಿ**

ಅವರು ಅರಣ್ಯದ ಕಡೆಗೆ ನೋಡಲಾಗಿ ಮೇಘದಲ್ಲಿ
ಯೆಹೋವನ ತೇಜಸ್ಸು ಅವರಿಗೆ ಕಾಣಿಸಿತು (ವಿಮೋ. 16:10).

# ಪ್ರಧಾನ ಬೋಧನೆಯ ನಾಲ್ಕು ಭಾಗಗಳು !

**"ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾ ಸ್ತುತಿಗಳನ್ನೂ ಮಾಡಬೇಕೆಂದು ಬೋಧಿಸುತ್ತೇನೆ"** (1 ತಿಮೊ. 2:1).

ಅಪೊ. ಪೌಲನು ತನ್ನ ಆತ್ಮೀಕ ಕುಮಾರನಾದ ತಿಮೊಥೆಯನಿಗೆ ಎರಡು ಪತ್ರಗಳನ್ನು ಬರೆದನು. ಅವುಗಳಲ್ಲಿರುವ ಹತ್ತು ಅಧ್ಯಾಯಗಳಲ್ಲಿ ಹೇರಳವಾದ ಬುದ್ಧಿವಾದಗಳನ್ನು ಬರೆದಿರುವನು. ಅವುಗಳಲ್ಲಿ ಉತ್ತಮವಾದ ಬುದ್ಧಿಮಾತೇನೆಂದರೆ **"ಎಲ್ಲಾ ಜನರಿಗಾಗಿ ದೇವರಿಗೆ ವಿಜ್ಞಾಪನೆಗಳನ್ನೂ, ಮನವಿಗಳನ್ನೂ, ಕೃತಜ್ಞತಾಸ್ತುತಿಗಳನ್ನೂ ಮಾಡಬೇಕು"**. ಯಾಕಂದರೆ ಪ್ರಾರ್ಥನೆಯೇ, ಜಯ ಪ್ರಾರ್ಥನೆಯೇ ಜೀವನ. ಪ್ರಾರ್ಥನೆಯು ಸರ್ವಲೋಕಗಳನ್ನೂ ಆಳುವ ಕರ್ತನ ಕರಗಳನ್ನು ಚಲಿಸುವಂತೆ ಮಾಡುವಂಥದ್ದು. **'ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ'** (ರೋಮ. 12:12). **'ಪ್ರಾರ್ಥನೆಯಲ್ಲಿ ಎಚ್ಚರವಾಗಿರಿ'** (ಲೂಕ. 21:36) ಎಂದು ಸತ್ಯವೇದ ಹೇಳುತ್ತದೆ.

ಅಪೊ. ಪೌಲನು ಪ್ರಾರ್ಥನೆಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸುತ್ತಾನೆ.

1. **ವಿಜ್ಞಾಪನೆ**
2. **ಪ್ರಾರ್ಥನೆ**
3. **ಬಿನ್ನಹ**
4. **ಸ್ತೋತ್ರ**

ಈ ನಾಲ್ಕೂ ಪ್ರಾರ್ಥನೆಯಲ್ಲಿ ಕಂಡು ಬರಬೇಕು. ಸೈತಾನನು ಯಾವಾಗ್ಯೂ, ಒಬ್ಬ ವಿಶ್ವಾಸಿಯ ಪ್ರಾರ್ಥನಾ ಜೀವಿತಕ್ಕೆ ತಡೆ ಉಂಟುಮಾಡುವನು. ಒಂದು ಮೃಗ ತನ್ನ ಬೇಟೆಯನ್ನು ಹಿಡಿಯುವಾಗ ಅದರ ಕಾಲನ್ನಾಗಲಿ ಬಾಲವನ್ನಾಗಲಿ ಹಿಡಿಯುವದಿಲ್ಲ. ಅದರ ಕತ್ತನ್ನು ಮುಖ್ಯವಾಗಿ ಶ್ವಾಸನಾಳವನ್ನು ಹಿಡಿದು ಅದರ ಉಸಿರಾಟವನ್ನು ನಿಲ್ಲಿಸುತ್ತದೆ. ಒಬ್ಬ ವಿಶ್ವಾಸಿಗೆ ಪ್ರಾರ್ಥನೆ ಎಂಬುದು ಅವನ ಉಸಿರು. ಅವನು ಪ್ರಾರ್ಥಿಸದಂತೆ ತಡೆಮಾಡಿದರೆ ಅವನು ಪಾಪದಲ್ಲಿ ಬಿದ್ದು ಆತ್ಮೀಕ ಮರಣವನ್ನು ಹೊಂದುವನು. ಆದರೆ ಪ್ರಾರ್ಥಿಸುವವನನ್ನು ಬೀಳಿಸುವದು ಬಹಳ ಕಠಿಣ. ಅವನು ಯಾವಾಗ್ಯೂ ಪರಲೋಕದೊಂದಿಗೆ ಅನ್ಯೋನ್ಯತೆಯನ್ನು ಹೊಂದಿದವನಾಗಿರುವದರಿಂದ ಬಲವೂ, ಮಹಿಮೆಯೂ ಉಳ್ಳವನಾಗಿರುವನು. ಅವನು ಕರ್ತನ ಅಧಿಕಾರವನ್ನು ಉಪಯೋಗಿಸಿ ಸೈತಾನನ ತಂತ್ರಗಳನ್ನು ಕಟ್ಟಿಹಾಕುವನು. ಈಗಾಗಲೇ ತಲೆ ಜಜ್ಜಲ್ಪಟ್ಟ ಸೈತಾನನು ವಿಶ್ವಾಸಿಯ ಪ್ರಾರ್ಥನೆಯಿಂದ ಆಗಾಗ ಜಜ್ಜಲ್ಪಡುವದರಿಂದ ಸಹಿಸಿಕೊಳ್ಳಲಾಗದ ವೇದನೆಯನ್ನು ಅನುಭವಿಸುವನು.

ಪ್ರಾರ್ಥನೆಯ ಸಮಯವೇ ನೀವು ಶುದ್ಧೀಕರಿಸಲ್ಪಡುವ ಸಮಯ ನಿಮ್ಮ ಬಲ ಹೆಚ್ಚುವ ಸಮಯ, ಪರಿಶುದ್ಧಾತ್ಮನ ಅಗ್ನಿ ಹತ್ತಿ ಉರಿಯುವ ಸಮಯ, ಆತ್ಮನ ವರಗಳು ಕಾರ್ಯ ನಿರ್ವಹಿಸುವ ಸಮಯ, ಕರ್ತನ ಬರುವಿಕೆ ಬಹು ಸಮೀಪವಾಗಿರುವದರಿಂದ ನಿಮ್ಮ ಪ್ರಾರ್ಥನಾ ವೇಳೆಯನ್ನು ಅಧಿಕಗೊಳಿಸಿ, ಪ್ರಾರ್ಥನೆಯೇ ನಿಮ್ಮ ಕುಟುಂಬವನ್ನು, ಮಕ್ಕಳನ್ನು ಪರಿಶುದ್ಧವಾಗಿ ಕಾಯುವಂಥದ್ದು. ನಿಮ್ಮ ಪ್ರಾರ್ಥನೆಯಿಂದಲೇ ಇತರರಿಗೆ ಒಳ್ಳೆಯದನ್ನು ಮಾಡಲು ಸಾಧ್ಯ. ಪ್ರಾರ್ಥಿಸುವ ಮನುಷ್ಯನು ಮಾತ್ರ ಎಲ್ಲಾ ಅಂಧಕಾರ ಶಕ್ತಿಗಳನ್ನು ಎದುರಿಸಿ ನಿಲ್ಲಲು ಸಾಧ್ಯ.

1) **ವಿಜ್ಞಾಪನೆಗಳು** :- ಪ್ರಾರ್ಥನೆಯ ಮೊದಲ ಭಾಗ ವಿಜ್ಞಾಪನೆಗಳು. ಧೂಪ ವರ್ಗದಲ್ಲಿ ರಕ್ತಬೋಳಕ್ಕೆ ಸಮವಾದದ್ದು. ಕರ್ತನ ಸಮ್ಮುಖದಲ್ಲಿ ಕರುಣೆ ಸಿಗಲು, ಜಜ್ಜಿದ ಹೃದಯದಿಂದ ವಿಜ್ಞಾಪನೆ ಮಾಡಿರಿ. ನಿಮ್ಮ ಜೀವಿತದಲ್ಲಿ ಪಾಪವು ನುಸುಳಿ ಮನಸ್ಸಾಕ್ಷಿ ಬಾಧಿಸುವಾಗ ಹೃದಯವನ್ನು ಕಠಿಣ ಪಡಿಸಿಕೊಳ್ಳದೆ ಕರ್ತನ ಪಾದಗಳಲ್ಲಿ ಕುಳಿತು ಪಾಪದ ಹರಿಕೆ ಮಾಡಿರಿ, ಕಣ್ಣೀರಿನಿಂದ ಗೋಳಾಡಿರಿ. ದಾವೀದನು ಬೆತ್ಸೇಬಳೊಂದಿಗೆ ವ್ಯಭಿಚಾರವೆಸಗಿ ಅವಳ ಗಂಡನನ್ನು ಕೊಲ್ಲಿಸಿದ ಪಾಪ ಕೃತ್ಯವನ್ನು ಪ್ರವಾದಿಯಾದ ನಾತಾನನು, ಅವನಿಗೆ ತಿಳಿಸಿ ಹೇಳಿದಾಗ ದೇವರ ನ್ಯಾಯ ತೀರ್ಪು ತನ್ನ ಮೇಲೆ ಬರುವುದಕ್ಕೆ ಮೊದಲೇ ಅವನು ಕರ್ತನ ಪಾದದಲ್ಲಿ ಬಿದ್ದು ಕಣ್ಣೀರಿನಿಂದ ಪ್ರಾರ್ಥಿಸಿ, ವಿಜ್ಞಾಪಿಸಿದನು (ಕೀರ್ತ. 51:1). ವಿಜ್ಞಾಪನೆ ಎಂಬುದು ಮಾನಸಾಂತರದಿಂದ ಜಜ್ಜಲ್ಪಟ್ಟ ಹೃದಯದಿಂದ ಹೊರಡುವ ಗೋಳಾಟವಾಗಿದೆ.

2) **ಪ್ರಾರ್ಥನೆಗಳು** : ಎರಡನೆಯ ಭಾಗ, ದೃಢಮನಸ್ಸಿನಿಂದ ಹೋರಾಡಿ ಪ್ರಾರ್ಥಿಸುವ ಪ್ರಾರ್ಥನೆಯಾಗಿದೆ. ರಕ್ಷಣೆಯ ಸಂತೋಷವನ್ನು ಪಡೆದ ನಂತರ, ನೀವು ಸೈತಾನನನ್ನೂ,

ಭಯಪಡಬೇಡ, ನಾನು ನಿನ್ನನ್ನು ವಿಮೋಚಿಸಿದೆನಲ್ಲಾ,
ನಿನ್ನ ಹೆಸರು ಹಿಡಿದು ಕರೆದೆನಲ್ಲಾ; ನೀನು ನನ್ನವನೇ (ಯೆಶಾ. 43:1).

ಅವನ ಕಾರ್ಯಗಳನ್ನೂ ಎದುರಿಸಿ ನಿಂತು ಹೋರಾಡಿ ಜಯವನ್ನು ಗಳಿಸಲೇಬೇಕಾಗಿದೆ. ಪರಿಶುದ್ಧವಾದ ಜೀವಿತಕ್ಕಾಗಿ ಇಚ್ಛೆಗಳನ್ನು ಎದುರಿಸಿ ನಿಂತು ಪ್ರಾರ್ಥಿಸಿ ಜಯಗಳಿಸಿರಿ. ತನ್ನ ಅಣ್ಣನಾದ ಏಸಾವನನ್ನು ಸಂಧಿಸಲು ಭಯಗೊಂಡ ಯಾಕೋಬನು ಯಬ್ಬೋಕ್ ಹೊಳೆಯ ದಂಡೆಯಲ್ಲಿ ನಿಂತು ಕರ್ತನ ಬಳಿ "ನನ್ನನ್ನು ಆಶೀರ್ವದಿಸದ ಹೊರತು ನಿನ್ನನ್ನು ಹೋಗಗೊಡುವದಿಲ್ಲ" ಎಂದು ಇಡೀ ರಾತ್ರಿ ಹೋರಾಡಿ ಪ್ರಾರ್ಥಿಸಿದನು. ಕೊನೆಯಲ್ಲಿ ಕರ್ತನು "ನೀನು ದೇವರೊಂದಿಗೂ, ಮನುಷ್ಯರೊಂದಿಗೂ ಹೋರಾಡಿ ಜಯಗಳಿಸಿದೆ. ಇನ್ನು ನಿನ್ನ ಹೆಸರು ಯಾಕೋಬನೆಂದು ಕರೆಯಲ್ಪಡದೆ, ಇಸ್ರಾಯೇಲನೆಂದು ಕರೆಯಲ್ಪಡುವದು" ಎಂದು ಹೇಳಿ ಅವನನ್ನು ಆಶೀರ್ವದಿಸಿದನು.

3) **ಬಿನ್ನಹಗಳು** :– ಬಿನ್ನಹಗಳೆಂದರೆ, ಸ್ವಾರ್ಥವಿಲ್ಲದೆ, ಇತರರಿಗಾಗಿ ಪ್ರಾರ್ಥಿಸುವದು, ಮನವಿಗಳನ್ನು ಸಲ್ಲಿಸುವದು, ಒಬ್ಬರ ಭಾರವನ್ನು ಒಬ್ಬರು ಹೊರುವುದಾಗಿದೆ. ನಿಮ್ಮ ಪ್ರಾರ್ಥನೆ ನಿಮಗಾಗಿ ನಿಮ್ಮ ಕುಟುಂಬಗಳಿಗೆ ಮಾತ್ರವೇ ಇರದೆ, ಭಾರತದ ಎಲ್ಲಾ ಜನರಿಗಾಗಿ ರಾಷ್ಟ್ರಪತಿಗಾಗಿ, ಪ್ರಧಾನಮಂತ್ರಿಗಾಗಿ, ಮುಖ್ಯಮಂತ್ರಿಗಳಿಗಾಗಿ, ಸಚಿವರುಗಳಿಗಾಗಿ, ಅಧಿಕಾರಿಗಳಿಗಾಗಿ, ನ್ಯಾಯಾಧಿಪತಿಗಳಿಗಾಗಿ ಕರ್ತನ ಬಳಿ ಬಿನ್ನಹಗಳನ್ನು ಮಾಡಿರಿ. ಇಂದು ನಮ್ಮ ದೇಶದಲ್ಲಿ ಎಡಗೈಗೂ ಬಲಗೈಗೂ ವ್ಯತ್ಯಾಸ ತಿಳಿಯದ ಕೋಟ್ಯಾಂತರ ಜನರಿರುವರು. ನಿಜವಾದ ದೇವರು ಯಾರು ಎಂದು ತಿಳಿಯದೆ ಪರಿತಪಿಸುತ್ತಿರುವರು. ಇಂಥವರ ರಕ್ಷಣೆಗಾಗಿ ಕರ್ತನಲ್ಲಿ ಬಿನ್ನಹಗಳನ್ನು ಸಲ್ಲಿಸಿರಿ.

4) **ಸ್ತೋತ್ರಗಳು** :– ನಾಲ್ಕನೆಯ ಭಾಗ, ಕರ್ತನ ನಾಮವನ್ನು ಸ್ತುತಿಸಿ ಆತನಿಗೆ ಸ್ತೋತ್ರಗಳನ್ನು ಸಲ್ಲಿಸುವದಾಗಿದೆ. ಕರ್ತನು ಸ್ತುತಿಗೆ ಪಾತ್ರನು. ಆರಾಧನೆಗೆ ಯೋಗ್ಯನು. ಎಲ್ಲಾ ಘನ ಮಾನ ಸ್ತುತಿಸ್ತೋತ್ರಗಳಿಗೆ ಅರ್ಹನು. ಆತನು ರಾಜಾಧಿರಾಜನು, ಕರ್ತಾಧಿಕರ್ತನಾಗಿರುವನು. ಆತನ ನಾಮವನ್ನು ಸ್ತುತಿಸಿರಿ. ಆತನು ಮಾಡಿದ ಅದ್ಭುತ ಕಾರ್ಯಗಳನ್ನು ಹೇಳಿ ಆತನನ್ನು ಕೊಂಡಾಡಿರಿ. ಇಸ್ರಾಯೇಲ್ಯರಿಗೆ ವಿರೋಧವಾಗಿ ಯೆರಿಕೋ ಕೋಟೆ ನಿಂತಾಗ ಕರ್ತನ ಆಜ್ಞೆಯಂತೆ ಅವರು ಮಾಡಿದ ಕಾರ್ಯ ಕರ್ತನನ್ನು ಸ್ತುತಿಸಿ ಸ್ತೋತ್ರಮಾಡಿದ್ದು. ಅವರ ಸ್ತುತಿ ಯೆರಿಕೋ ಗೋಡೆಯನ್ನು ಕೆಡವಿಹಾಕಿತು. ಇಂದು ನಿಮ್ಮ ಜೀವಿತದಲ್ಲಿ ಯೆರಿಕೋ ಗೋಡೆಯಂತಹ ಯಾವುದೇ ತಡೆ, ಸಮಸ್ಯೆಗಳಿದ್ದರೂ ಸಮಸ್ಯೆಯ ಕಡೆಗೆ ನೋಡದೆ ಕರ್ತನನ್ನು ಸ್ತುತಿಸುವಾಗ ಆ ಸಮಸ್ಯೆಗಳು ಮಂಜಿನಂತೆ ಕರಗಿ ಮಾಯವಾಗುವದು.

ದೇವಜನರೇ, ನಿಮ್ಮ ಜೀವಿತದಲ್ಲಿ ಪ್ರಾರ್ಥನೆಗೆ ಮೊದಲ ಸ್ಥಾನ ಕೊಡಿರಿ. ನಿಮ್ಮ ಪ್ರಯತ್ನಕ್ಕೆ ಮೊದಲು ಎಲ್ಲಾ ಕಾರ್ಯಗಳನ್ನು ಕರ್ತನ ಪಾದದಲ್ಲಿಟ್ಟು ಪ್ರಾರ್ಥಿಸಿರಿ ಜಯ ನಿಮ್ಮದಾಗುವದು. ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ ಮಾತ್ರವಲ್ಲ, ಎಲ್ಲರಿಗಾಗಿ ವಿಜ್ಞಾಪನೆಗಳನ್ನೂ, ಪ್ರಾರ್ಥನೆಗಳನ್ನೂ, ಬಿನ್ನಹಗಳನ್ನೂ ಸ್ತುತಿಸ್ತೋತ್ರಗಳನ್ನೂ ಕರ್ತನಿಗೆ ಸಲ್ಲಿಸಿರಿ.

ಸಂಗ್ರಹ.

## ವಿಶೇಷ ಸೂಚನೆ

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2002781, 0091 9902334941, 0091 9964070654, 0091 820 2559712.**

ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ ಪ್ರೀತಿ ಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವವನೂ ಆಗಿದ್ದಾನೆ (ಕೀರ್ತ. 103:4).

# ಭಕ್ತರ ಹೇಳಿಕೆಗಳು :

ಒಂದು ಸಾರಿ ಸುಪ್ರಸಿದ್ಧ ದೇವಸೇವಕರಾದ ಟಿ.ಎಲ್.ಎಸ್ ಬಾರ್ನ್‌ರವರು ಹೇರಳವಾದ ಜನರ ಮಧ್ಯದಲ್ಲಿ ನಿಂತು ಇಂದು ನಿಮ್ಮಲ್ಲಿ ಹಲವಾರು ವ್ಯಾಧಿಗಳು ಇರಬಹುದು, ನೋವುಗಳು ಇರಬಹುದು ಆದರೆ ನಿಮ್ಮ ಅಂಗಗಳು ಹೇಳುವದನ್ನು ನಂಬಬೇಡಿ. ವೈದ್ಯಕೀಯ ವರದಿಗಳು ಹೇಳುವದನ್ನು ನಂಬಬೇಡಿ ಸತ್ಯವೇದ ವಾಕ್ಯಗಳನ್ನು ನಂಬಿರಿ. ಯೇಸುಕ್ರಿಸ್ತನನ್ನು ಆಶ್ರಯಿಸಿಕೊಳ್ಳಿರಿ ಆತನು ನಿಮ್ಮನ್ನು ಗುಣಪಡಿಸಲು ಶಕ್ತನು ಎಂದು ಪ್ರಾರ್ಥಿಸಿದಾಗ ಅಲ್ಲಿದ್ದ ಅನೇಕರು ಗುಣಹೊಂದಿದರು. ಜನರು ಕರ್ತನೇ ದೇವರೆಂದು ನಂಬಿ ಆತನನ್ನು ಅಂಗೀಕರಿಸಿದರು.

ಇಂದು ಒಂದು ವೇಳೆ ನೀವು ನಿಮಗಾಗುತ್ತಿರುವ ನೋವಿನಲ್ಲಿ ವೈದ್ಯಕೀಯ ವರದಿಯಲ್ಲಿ ಕಳವಳಕ್ಕೆ ಒಳಗಾಗಿರಬಹುದು ಒಮ್ಮೆ ಪರಲೋಕವನ್ನು ದೃಷ್ಟಿಸಿ ನೋಡಿರಿ ಅಲ್ಲಿನ ವರದಿ ಹೇಳುತ್ತದೆ, "ಯೇಸುಕ್ರಿಸ್ತನ ಬಾಸುಂಡೆಗಳಿಂದ ನಿನಗೆ ಗುಣವಾಯಿತು" ಎಂದು. ಆತನ ಗಾಯಗಳಿಂದ ಹೊರಸೂಸುತ್ತಿರುವ ಸ್ವಸ್ಥತೆಯ ಕಿರಣಗಳನ್ನು ಕಾಣಬಹುದು. ಅವುಗಳನ್ನು ನಂಬಿಕೆಯಿಂದ ಸ್ವೀಕರಿಸಿರಿ, ಸ್ವಸ್ಥತೆಯನ್ನು ಹೊಂದಿಕೊಳ್ಳಿರಿ.

**ಟಿ.ಎಲ್.ಎಸ್. ಬಾರ್ನ್.**

ರಿಚರ್ಡ್ ಉಂಬ್ರಾಡ್ ಎಂಬ ಭಕ್ತನು ಸುಮಾರು 14 ವರ್ಷಗಳು ಸೆರೆವಾಸ ಮಾಡಬೇಕಾಯಿತು. ಹಸಿವೆಯಿಂದ ಬಳಲಿದಾಗ ನಿದ್ರೆಯಿಲ್ಲದೆ ಪರಿತಪಿಸಿದಾಗ ಮೂರ್ಛೆಗೊಂಡ ವೇಳೆಗಳಲ್ಲಿ, ಅವರು ಹೇಳುತ್ತಾರೆ, ಯೇಸುಕ್ರಿಸ್ತನ ನಾಮ ಒಂದೇ. ಆಸೆಗಳನ್ನೂ ಇಚ್ಛೆಗಳನ್ನೂ ಉದ್ರೇಕಗೊಳಿಸುವ ಔಷಧಗಳನ್ನೂ, ಮಾದಕ ವಸ್ತುಗಳನ್ನೂ, ಬಲವಂತದಿಂದ ಸೇವಿಸಬೇಕಾದ ಸಮಯಗಳಲ್ಲಿ ಬುದ್ಧಿಯನ್ನೇ ಪಲ್ಲಟಗೊಳಿಸುವ ಯಂತ್ರಗಳನ್ನು ನಮ್ಮ ತಲೆಗೆ ಅಳವಡಿಸಿದಾಗಲೂ, ಯೇಸುವಿನ ನಾಮವು ನಮ್ಮ ಉಸಿರಿನೊಂದಿಗೆ ಉಸಿರಾಗಿ, ಹೃದಯದ ಬಡಿತದೊಂದಿಗೆ ಒಂದಾಗಿದ್ದರಿಂದಲೇ ನಾವು ಜಯಿಸಲು ಸಾಧ್ಯವಾಯಿತು. ವೈರಿಯ ಆಯುಧಗಳನ್ನು ಎದುರಿಸಲಬಲ್ಲಂಥ ದೈವೀಕ ಬಲವನ್ನು ಯೇಸುವಿನ ನಾಮವು ನಮಗೆ ಉಣಿಸುತ್ತಿದ್ದಿತು ಎಂದು ಹೇಳಿದ್ದಾರೆ. ಹೌದು, "ಕರ್ತನ ನಾಮವು ಬಲವಾದ ಬುರುಜು ಶಿಷ್ಟನು ಅದರೊಳಕ್ಕೆ ಓಡಿಹೋಗಿ ಭದ್ರವಾಗಿರುವನು" (ಜ್ಞಾನೋ. 18:10).

**ರಿಚರ್ಡ್ ಉಂಬ್ರಾಡ್.**

ಭಕ್ತ ಅಗಸ್ಟೀನ್ ತನ್ನನ್ನು ಕರ್ತನಿಗೆ ಒಪ್ಪಿಸಿಕೊಡುವ ಮುನ್ನ ಸಮಾಧಾನವಿಲ್ಲದವರಾಗಿದ್ದರು. ಪ್ರಾರ್ಥಿಸಿದರೆ ಸಮಾಧಾನವಾಗಬಹುದೆಂದು ಎಣಿಸಿ ಕರ್ತನೇ ನನ್ನ ಪಾಪಗಳಿಂದ ನನ್ನನ್ನು ಬಿಡಿಸು; ಆದರೆ ನಾನು ಅವುಗಳನ್ನು ಮಾಡದೆ ಇರಲಾರೆ ಎಂದು ಪ್ರಾರ್ಥಿಸಿದರು. ಇದರಿಂದ ಅವರಿಗೆ ಸಮಾಧಾನವಾಗಲಿಲ್ಲ. ಆದ್ದರಿಂದ ಪುನ: ಕರ್ತನೇ ನನ್ನ ಪಾಪಗಳಿಂದ ನನ್ನನ್ನು ರಕ್ಷಿಸು. ಆದರೆ ಒಂದು ಪಾಪವನ್ನು ಮಾತ್ರ ನಾನು ಬಿಡಲಾರೆ ಎಂದು ಪ್ರಾರ್ಥಿಸಿದರು. ಆದರೆ ಅವರಿಗೆ ಸಮಾಧಾನವಾಗಲಿಲ್ಲ. ಆದ್ದರಿಂದ "ಕರ್ತನೇ ನನ್ನ ಎಲ್ಲಾ ಪಾಪಗಳಿಂದಲೂ ನನಗೆ ಬಿಡುಗಡೆ ಕೊಡು, ಈಗಲೇ ರಕ್ಷಿಸು" ಎಂದು ಬೇಡಿದರು. ಪೂರ್ಣವಾದ ಅರ್ಪಣೆಯ ಪ್ರಾರ್ಥನೆಯೇ, ಜೀವಿತದಲ್ಲಿ ಸ್ಥಿರವಾದ ದೇವ ಸಮಾಧಾನವನ್ನು ಕೊಡಬಲ್ಲದು. ಕರ್ತನಿಗೆ ಪೂರ್ಣವಾಗಿ ಅರ್ಪಿಸಿ ಪ್ರಾರ್ಥನೆ ಮಾಡಿರಿ.

**ಅಗಸ್ಟೀನ್**

---

**ಪ್ರಿಯ ವಾಚಕರಲ್ಲಿ ವಿನಂತಿ**

**ಕಳೆದ ಜೂನ್ ತಿಂಗಳ ಮಾಸ ಪತ್ರಿಕೆಯಲ್ಲಿ ಭಕ್ತರ ಹೇಳಿಕೆಗಳು ಇದಕ್ಕೆ ಬದಲಾಗಿ ವಿಶ್ವಾಸದಮನೆಗೆ ಭೇಟಿ ನೀಡಿದವರ ಅನಿಸಿಕೆಗಳು ಎಂದು ತಪ್ಪಾಗಿ ಮುದ್ರಿತವಾಗಿದೆ ಇದಕ್ಕಾಗಿ ನಾವು ವಿಷಾದಿಸುತ್ತೇವೆ.**

ನಾನು ಯೆಹೋವನ ದೃಷ್ಟಿಯಲ್ಲಿ ಮಾನ್ಯನು, ನನ್ನ ದೇವರೇ ನನಗೆ ಬಲವು.
(ಯೆಶಾ. 49:5).



# ಸ್ಥಳೀಯ ಮತ್ತು ವಿದೇಶ ಸುದ್ದಿ

- ತಟ ರಕ್ಷಣಾ ಪಡೆಯ ಡಾರ್ನಿಯರ್ ಕಣ್ಗಾವಲು ವಿಮಾನವೊಂದು ಚೆನ್ನೈ ಕರಾವಳಿಯಲ್ಲಿ ನಾಪತ್ತೆಯಾಗಿದೆ. ಅದರಲ್ಲಿ ಮೂವರು ಸಿಬ್ಬಂದಿ ಇದ್ದರು. ಸಿಜಿ–791 ವಿಮಾನಕ್ಕಾಗಿ ತಟ ರಕ್ಷಣಾ ಪಡೆ ಮತ್ತು ನೌಕಾ ಪಡೆ ಬೃಹತ್ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ನಡೆಸುತ್ತಿವೆ.

- ದಾನದತ್ತಿ ಚಟುವಟಿಕೆಗಳ ಹೆಸರಿನಲ್ಲಿ ಅಕ್ರಮವಾಗಿ ಆದಾಯ ತೆರಿಗೆ ವಿನಾಯಿತಿಯನ್ನು ಪಡೆದುಕೊಳ್ಳುವ 'ವಂಚಕ' ಸಂಸ್ಥೆಗಳ ವಿರುದ್ಧ ತೆರಿಗೆ ಅಧಿಕಾರಿಗಳು ಪ್ರಬಲ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಬೇಕು ಎಂದು ಆದಾಯ ತೆರಿಗೆ ಇಲಾಖೆಗೆ ಕೇಂದ್ರೀಯ ನೇರ ತೆರಿಗೆಗಳ ಮಂಡಳಿ(ಸಿಬಿಡಿಟಿ) ಸೂಚನೆ ನೀಡಿದೆ.

- ದೇಶದ ಮಂಗಳಯಾನ ಯೋಜನೆಗೆ ಅಮೆರಿಕದ ರಾಷ್ಟ್ರೀಯ ಬಾಹ್ಯಾಕಾಶ ಸಮಾಜವು 2015ರ ಸಾಲಿನ 'ಮುಂಚೂಣಿ ಬಾಹ್ಯಾಕಾಶ ಯೋಜನೆ' ಪ್ರಶಸ್ತಿಯನ್ನು ನೀಡಿದೆ.

- ರೈಲು ಬೋಗಿಗಳಲ್ಲಿರುವ 'ರೈಲು ನಿಲ್ಲಿಸಲು ಸರಪಳಿ ಎಳೆಯಿರಿ' ಎಂಬ ಘಟಕವು ಸದ್ಯವೇ ಇತಿಹಾಸವನ್ನು ಸೇರಲಿದೆ. ಈ ಸರಪಳಿಗಳನ್ನು ತೆಗೆಯಲು ರೈಲ್ವೆ ಸಚಿವಾಲಯ ನಿರ್ಧರಿಸಿದೆ.

- ಕೆಎಸ್ಸಾರ್ಟಿಸಿಯು ಅಂತಾರಾಷ್ಟ್ರೀಯ ಸಾರ್ವಜನಿಕ ಸಾರಿಗೆ ಪ್ರಶಸ್ತಿಗೆ ಭಾಜವಾಗಿದ್ದು, ನಿಗಮದಲ್ಲಿ ಅನುಷ್ಠಾನಗೊಳಿಸಿರುವ ಸ್ಟಾಫ್ ಡ್ಯೂಟಿ ರೋಟಾ ಸಿಸ್ಟಮ್ ಉಪಕ್ರಮವು ಮಾನವ ಸಂಪನ್ಮೂಲ ವಿಭಾಗದ ಅತ್ಯುತ್ತಮ ಉಪಕ್ರಮವಾಗಿ ಹೊರಹೊಮ್ಮಿದೆ.

- ಆಹಾರ ಸುರಕ್ಷತೆಯ ಬಗ್ಗೆ ಕಳವಳ ಹೆಚ್ಚುತ್ತಿರುವಂತೆಯೇ ಪೂರ್ವ ಆಫ್ರಿಕದ ಅತಿದೊಡ್ಡ ಮಾರುಕಟ್ಟೆ ಸರಪಣಿಯ ಐದು ರಾಷ್ಟ್ರಗಳಲ್ಲಿರುವ ಮಳಿಗೆಗಳಿಂದ ನೆಸ್ಲೆಯ ಮ್ಯಾಗಿ ನೂಡಲ್ ಸಂಗ್ರಹವನ್ನು ಹಿಂದೆಗೆಯಲಾಗಿದೆ.

- ರಾಷ್ಟ್ರದಲ್ಲಿ ಮತ್ತೆ ಎಂಟು ಮರ್ಸ್ (ಮಿಡ್ಲ್ ಈಸ್ಟ್ ರೆಸ್ಪಿರೇಟರಿ ಸಿಂಡ್ರೋಮ್) ಸೋಂಕಿನ ಪ್ರಕರಣಗಳು ಪತ್ತೆಯಾಗಿದ್ದು, ಈ ವರ್ಷದ ಅವಧಿಯಲ್ಲಿ ಪತ್ತೆಯಾಗಿರುವ ಒಟ್ಟು ಮರ್ಸ್ ಪ್ರಕರಣಗಳ ಸಂಖ್ಯೆಯು 95ಕ್ಕೆ ಏರಿದೆ ಎಂದು ದಕ್ಷಿಣ ಕೊರಿಯದ ಆರೋಗ್ಯ ಸಚಿವಾಲಯ ತಿಳಿಸಿದ್ದಾರೆ.

- ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಯಾವುದೇ ವ್ಯಕ್ತಿ ಸೌಲಭ್ಯಗಳಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಮತ್ತೊಮ್ಮೆ ಸೂಚಿಸಿದೆ.

- ಮುಂದಿನ ಐದು ವರ್ಷದೊಳಗೆ ರೈಲು ಬೋಗಿಗಳಲ್ಲಿ ಈಗ ಇರುವ ಶೌಚಾಲಯಗಳ ಬದಲಾಗಿ ಪರಿಸರ ಸ್ನೇಹಿ ಜೈವಿಕ ಶೌಚಾಲಯಗಳನ್ನು ಅಳವಡಿಸಲು ರೈಲ್ವೆ ಕ್ರಿಯಾ ಯೋಜನೆ ರೂಪಿಸಿದೆ. ಈಗಿರುವ ಶೌಚಾಲಯಗಳ ಮೂಲಕ ನೇರವಾಗಿ ತ್ಯಾಜ್ಯ ರೈಲು ಹಳಿಗಳ ಮೇಲೆ ಬೀಳುವುದರಿಂದ ಹಳಿ ಸವೆಯುತ್ತಿದ್ದು, ಮರು ಜೋಡಣೆಗಾಗಿ ರೈಲ್ವೆಯು ಕೋಟ್ಯಾಂತರ ರೂ. ವೆಚ್ಚ ಮಾಡುತ್ತಿದೆ.

- ಸೌದಿ ಅರೇಬಿಯಾದ ವ್ಯಕ್ತಿಯೊಬ್ಬರ ವಿರುದ್ಧ ವಾಟ್ಸ್ಆ್ಯಪ್‌ನಲ್ಲಿ ಅವಹೇಳನಕಾರಿ ಸಂದೇಶ ಕಳುಹಿಸಿದ್ದಕ್ಕಾಗಿ 32 ವರ್ಷದ ಮಹಿಳೆಯೊಬ್ಬರಿಗೆ 70 ಛಡಿಯೇಟು ಮತ್ತು 20 ಸಾವಿರ ಸೌದಿ ರಿಯಾಲ್ (ರೂ. 3.25 ಲಕ್ಷ) ದಂಡದ ಶಿಕ್ಷೆ ವಿಧಿಸಲಾಗಿದೆ. ವಾಟ್ಸ್ಆ್ಯಪ್‌ನಲ್ಲಿ ಮಹಿಳೆ ತನ್ನನ್ನು ಅಪಮಾನಿಸಿದ್ದಾಳೆ ಎಂದು ಪೂರ್ವ ಸೌದಿ ಅರೇಬಿಯಾದ ಅಪರಾಧ ನ್ಯಾಯಾಲಯದಲ್ಲಿ ವ್ಯಕ್ತಿ ದೂರು ದಾಖಲಿಸಿದ್ದರು.

## ಪ್ರಾರ್ಥನಾ ಮನವಿಗಳು

- **ಭಾರತ ದೇಶದ ರಕ್ಷಣೆಗಾಗಿ ಪ್ರಾರ್ಥಿಸಿರಿ. ಕರ್ತನ ಕೃಪೆಯನ್ನು ದೇಶದ ಮೇಲೆ ಕೇಳಿಕೊಳ್ಳೋಣ.**
- **ಸಭೆಗಳ ಉಜ್ಜೀವನಕ್ಕಾಗಿ, ಸೇವೆಗಳು ಆಶೀರ್ವದಿಸಲ್ಪಡುವದಕ್ಕಾಗಿ ಪ್ರಾರ್ಥಿಸಿರಿ.**
- **ವಾತಾವರಣವನ್ನು ಕರ್ತನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನಡೆಸುವುದಕ್ಕಾಗಿ ಯಾವುದೇ ಭೂಕಂಪಗಳು, ಸುನಾಮಿಗಳು, ಚಂಡಮಾರುತಗಳು ಸಂಭವಿಸದ ಹಾಗೆ ಪ್ರಾರ್ಥಿಸಿರಿ.**
- **ದೇಶದಲ್ಲಿರುವ ಯೌವನಸ್ಥ ಮಕ್ಕಳ ಪರಿಶುದ್ಧತೆಗಾಗಿ, ಸುರಕ್ಷತೆಗಾಗಿ ಮತ್ತು ಅಭ್ಯುದಯಕ್ಕಾಗಿ ಪ್ರಾರ್ಥಿಸೋಣ.**
- **ನಮ್ಮ ದೇಶದಲ್ಲಿರುವ ಎಲ್ಲಾ ಬರಗಾಲಗಳು, ಬಡತನಗಳು, ನೀರಿನ ಕೊರತೆಗಳು, ವಿದ್ಯುತ್‌ಚ್ಛಕ್ತಿಯ ಕೊರತೆಗಳು ನೀಗುವಂತೆ ದೇಶದಲ್ಲಿ ಸಮೃದ್ಧಿ ಉಂಟಾಗುವಂತೆ ಪ್ರಾರ್ಥಿಸಿರಿ.**

ನನ್ನ ಬಾಯನ್ನು ಹದವಾದ ಖಡ್ಗವನ್ನಾಗಿ ಮಾಡಿ
ತನ್ನ ಕೈಯ ನೆರಳಿನಲ್ಲಿ ನನ್ನನ್ನು ಹುದುಗಿಸಿದ್ದಾನೆ (ಯೆಶಾ. 49:2).

# ಆಹಾ ಮಸಾಲಾ ಚಹಾ!

ಆರೋಗ್ಯ ಸ್ವರ

- ಕೆಲವು ವಿಚಾರಗಳಲ್ಲಿ ಹರ್ಬಲ್ ಟೀ ಅಥವಾ ಗ್ರೀನ್ ಟೀಗಿಂತ ಮಸಾಲಾ ಚಹಾ ಆರೋಗ್ಯಕ್ಕೆ ತುಂಬಾ ಒಳ್ಳೆಯದು.
- ಮಸಾಲಾ ಚಹಾದಲ್ಲಿರುವ ಸಾಂಬಾರ ಪದಾರ್ಥಗಳು ದೇಹದಲ್ಲಿರುವ ಉರಿಯೂತವನ್ನು ನೈಸರ್ಗಿಕವಾಗಿ ನಿವಾರಿಸುತ್ತದೆ.
- ಮಸಾಲಾ ಚಹಾದಲ್ಲಿರುವ ಟ್ಯಾನಿನ್ ಅಂಶ ದೇಹವನ್ನು ಶಾಂತಗೊಳಿಸಿ ನಿಮಗೆ ಶಕ್ತಿಯನ್ನು ನೀಡುತ್ತದೆ, ಆಯಾಸವನ್ನು ಪರಿಹರಿಸುತ್ತದೆ.
- ಮಸಾಲಾ ಚಹಾದಲ್ಲಿರುವ ಏಲಕ್ಕಿ ಮತ್ತು ಶುಂಠಿ ನಿಮ್ಮ ಕಟ್ಟಿದ ಮೂಗಿನ ಕಿರಿಕಿರಿ ನಿವಾರಿಸುತ್ತದೆ.
- ದಾಲ್ಚಿನ್ನಿ, ಏಲಕ್ಕಿ, ಲವಂಗ ಮಸಾಲಾ ಚಹಾದಲ್ಲಿರುವ ಸಾಂಬಾರು ಪದಾರ್ಥಗಳಾಗಿದ್ದು ನಿಮ್ಮ ದೇಹದ ರೋಗ ನಿರೋಧಕ ಶಕ್ತಿಯನ್ನು ವರ್ಧಿಸುತ್ತವೆ. ಬೇಸಿಗೆಯಲ್ಲಿ ಕಂಡುಬರುವ ಸಾಮಾನ್ಯ ಸೋಂಕುಗಳನ್ನು ನಿವಾರಿಸುವ ಸಾಮರ್ಥ್ಯ ಮಸಾಲಾ ಚಹಾಕ್ಕಿದೆ.
- ಮಸಾಲಾ ಚಹಾದಲ್ಲಿರುವ ನೈಸರ್ಗಿಕ ಸಾಂಬಾರು ಪದಾರ್ಥಗಳು ನಿಮ್ಮ ಜೀರ್ಣಕ್ರಿಯೆಗೆ ಸಹಕಾರಿ. ಇದರಲ್ಲಿರುವ ಶುಂಠಿ ಆಸಿಡಿಟಿ ನಿವಾರಿಸುತ್ತದೆ.
- ಅಪಧಮನಿಯ ಬ್ಲಾಕ್‌ಗಳಲ್ಲಿ ಪ್ಲೇಕ್ ರಚನೆಯನ್ನು ತಡೆಗಟ್ಟಿ ಹೃದಯವನ್ನು ಕಾಪಾಡುತ್ತದೆ. ರಕ್ತದೊತ್ತಡದ ಸಮಸ್ಯೆಯಿದ್ದಲ್ಲಿ ದಿನವೂ ಒಂದು ಕಪ್ ಸೇವಿಸಿ.

# ಕಲ್ಲಂಗಡಿ ಹಣ್ಣು

ದಕ್ಷಿಣ ಆಫ್ರಿಕಾ ಮೂಲವಾದ ಕಲ್ಲಂಗಡಿ ವಿಟಮಿನ್ ಭರಿತವಾದ ಹಣ್ಣಾಗಿದೆ. ವಿಟಮಿನ್ ಎ, ಬಿ6 ಮತ್ತು ಸಿಯನ್ನು ಒಳಗೊಂಡಿರುವ ಕಲ್ಲಂಗಡಿ ಬಹು ವಿಟಮಿನ್ ಸಿ ಅಂಶ ರೋಗ ನಿರೋಧಕ ಶಕ್ತಿಯನ್ನು ವರ್ಧಿಸಿ ದೇಹಕ್ಕೆ ಚೈತನ್ಯವನ್ನುಂಟು ಮಾಡುತ್ತದೆ.

ಇತರ ಹಣ್ಣು ತರಕಾರಿಗಳಿಗಿಂತ ಲೈಕೊಪಿನ್ ಹೆಚ್ಚಾಗಿರುವ ಕಲ್ಲಂಗಡಿ ಕೊಬ್ಬು ಮುಕ್ತ ನೈಸರ್ಗಿಕ ಕೊಡುಗೆಯಾಗಿದೆ. ಕೊಲೆಸ್ಟ್ರಾಲ್ ಅಂಶವಿಲ್ಲದ ದೇಹಕ್ಕೆ ಶಕ್ತಿಯನ್ನು ಒದಗಿಸುವ ವಿಟಮಿನ್ ಭರಿತ ಹಣ್ಣಾದ ಕಲ್ಲಂಗಡಿ ಬೇಸಿಗೆಯ ಬೇಗೆಯನ್ನು ಕಳೆಯುವಲ್ಲಿ ಸಹಕಾರಿ. ಇದನ್ನು ಜ್ಯೂಸ್ ಅಥವಾ ಹಾಗೇ ಕೂಡ ಸೇವಿಸಬಹುದು. ಕಲ್ಲಂಗಡಿ ಬಾಯಾರಿಕೆಯನ್ನು ಮಾತ್ರ ತೀರಿಸದೆ ರೋಗಗಳ ವಿರುದ್ಧ ಹೋರಾಡುವ ಗುಣವನ್ನು ಹೇರಳವಾಗಿಸಿಕೊಂಡ ಸಮೃದ್ಧ ಹಣ್ಣು. ಮೊಡವೆಗೆ ಇದನ್ನು ಹಚ್ಚಿದರೆ ನೈಸರ್ಗಿಕವಾಗಿ ಕಡಿಮೆಯಾಗುತ್ತದೆ. ಕಲ್ಲಂಗಡಿ ಹಣ್ಣನ್ನು ಮುಖಕ್ಕೆ ಮಸಾಜ್ ಮಾಡಬಹುದು. ಇದನ್ನು ಮುಖ ಹಾಗೂ ಕತ್ತಿನ ಭಾಗಕ್ಕೆ ಹಚ್ಚಿ, 20 ನಿಮಿಷದ ಬಳಿಕ ತೊಳೆದರೆ ತ್ವಚೆ ಬೆಳ್ಳಗಾಗುವುದು. ಎಣ್ಣೆ ತ್ವಚೆಯನ್ನು ಹೋಗಲಾಡಿಸುತ್ತದೆ. ಇದರಲ್ಲಿ ವಿಟಮಿನ್ ಎ ಇರುವುದರಿಂದ ತ್ವಚೆಯಲ್ಲಿ ಅಧಿಕ ಎಣ್ಣೆಯಂಶ ಉತ್ಪತ್ತಿಯಾಗುವುದನ್ನು ತಡೆಯುತ್ತದೆ. ಮುಖದಲ್ಲಿ ರಂಧ್ರಗಳಿದ್ದರೆ ಇದನ್ನು ಹಚ್ಚುತ್ತಾ ಬಂದರೆ ಉತ್ತಮ ಫಲಿತಾಂಶ ಕಾಣಬಹುದು. ತೂಕವನ್ನು ಕಮ್ಮಿ ಮಾಡುತ್ತದೆ.

ನೀರಿನಂಶ ಅಧಿಕವಿರುವುದರಿಂದ ತೆಳ್ಳಗಾಗಲು ಡಯಟ್ ಮಾಡುವವರು ಒಂದು ಹೊತ್ತು ಕಲ್ಲಂಗಡಿ ಹಣ್ಣು ತಿನ್ನಿ. ಇದರಿಂದ ದೇಹಕ್ಕೆ ಅಗತ್ಯವಾದ ಪೋಷಕಾಂಶ ದೊರೆಯುತ್ತದೆ, ತೂಕವೂ ಕಡಿಮೆಯಾಗುವುದು. ಕಲ್ಲಂಗಡಿ ರಕ್ತ ಸಂಚಾರ ಸರಿಯಾಗಿ ನಡೆಯುವಂತೆ ಮಾಡಿ ಆರೋಗ್ಯವನ್ನು ಹೆಚ್ಚಿಸುತ್ತದೆ. ದೇಹವನ್ನು ತಂಪಾಗಿಸುತ್ತದೆ. ಬೇಸಿಗೆಯಲ್ಲಿ ತಿನ್ನಲೇಬೇಕಾದ ಹಣ್ಣುಗಳಲ್ಲಿ ಕಲ್ಲಂಗಡಿ ಹಣ್ಣು ಕೂಡ ಒಂದು. ಇದು ದೇಹವನ್ನು ತಂಪಾಗಿ ಇಡುತ್ತದೆ. ಮಾನಸಿಕ ಒತ್ತಡವನ್ನು ಕಡಿಮೆಮಾಡುತ್ತದೆ. ಇದನ್ನು ಪ್ರತಿದಿನ ತಿಂದರೆ ಮಾನಸಿಕ ಒತ್ತಡ ಕಡಿಮೆಯಾಗಿ ಖಿನ್ನತೆ ಮಾಯವಾಗುವುದು.

ಇದರಲ್ಲಿ ಫಾಲಿಕ್ ಆ್ಯಸಿಡ್ ಅಧಿಕವಿರುವದರಿಂದ ಗರ್ಭಿಣಿಯರಿಗೆ ಸೂಕ್ತವಾದ ಆಹಾರವಾಗಿದೆ. ಅಲ್ಲದೆ ಇದರಲ್ಲಿ ಖನಿಜಾಂಶಗಳು ಇರುವುದರಿಂದ ಪೋಷಕಾಂಶದ ಕೊರತೆ ಉಂಟಾಗುವುದಿಲ್ಲ.

ಸಂಗ್ರಹ.

ಈ ಪ್ರಸನ್ನತೆಯ ಕಾಲದಲ್ಲಿ ನಿನಗೆ ಸದುತ್ತರವನ್ನು ದಯಪಾಲಿಸಿದ್ದೇನೆ,
ಈ ರಕ್ಷಣೆಯ ದಿನದಲ್ಲಿ ನಿನಗೆ ಸಹಾಯಮಾಡಿದ್ದೇನೆ. (ಯೆಶಾ. 49:8).

## ಡಿಜಿಎಮ್ ಬೇತೇಲ್ ಅಂಕಣ

- ಕರ್ತನ ಕೃಪೆಯಿಂದ ವಿಶ್ವಾಸದಮನೆಯಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ಬೇಬಿಯವರು 16 ವರ್ಷದ ಬಳಿಕ ತಮ್ಮ ಮನೆಗೆ (ಪಶ್ಚಿಮ ಬಂಗಾಳ) ತೆರಳಿದ್ದಾರೆ.
- ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಟ್ಟ 40 ದಿವಸದ ಉಪವಾಸ ಕೂಟವು ಕರ್ತನ ಕೃಪೆಯಿಂದ ಒಳ್ಳೇ ರೀತಿಯಲ್ಲಿ ನಡೆಯಿತು, ಈ ಕೂಟದಲ್ಲಿ ಅನೇಕರು ಭಾಗವಹಿಸಿ ಕರ್ತನಿಂದ ಆಶೀರ್ವಾದವನ್ನು, ಬಿಡುಗಡೆಯನ್ನು, ಸ್ವಸ್ಥತೆಯನ್ನು ಹೊಂದಿಕೊಂಡರು.
- ಆಗಸ್ಟ್ 17 ರಿಂದ 26ರವರೆಗೆ 11ನೇ ಕೆರೀತ್ ಕೂಟವು ನಡೆಸಲ್ಪಡುವದು.

# ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

### ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ, ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0091 820 2559886**

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು
- ನೋಟ್ ಬುಕ್ಸ್
- ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2002781, 0091 9902334941

ನಿನ್ನ ಬಾಯಲ್ಲಿ ನನ್ನ ಮಾತುಗಳನ್ನು ಇಟ್ಟು ನನ್ನ ಕೈಯ ನೆರಳಿನಲ್ಲಿ ನಿನ್ನನ್ನು ಹುದುಗಿಸಿದ್ದೇನೆ. (ಯೆಶಾ. 51:16).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 0091 9902334941**

## ನಿಮ್ಮಗೆಲ್ಲಾ ಸಂತಸ ಸುದ್ದಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

## ಆಶ್ರಮದ ಅವಶ್ಯಕತೆಗಳು

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0091 9902334941, 0091 8202002781, 0091 9964070654**

ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭ ಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ. (ಯೆಶಾ. 52:7).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

॥ **ದೇವರ ವಾಕ್ಯದ ಸರಿಯಾದ ತಿಳುವಳಿಕೆ ಇರಬೇಕು :–** ಅನೇಕರಿಗೆ ದೇವರ ವಾಕ್ಯಗಳು ಗೊತ್ತು, ತಿಳುವಳಿಕೆ ಅನೇಕರಿಗೆ ಕಡಿಮೆ ಇರುವುದನ್ನು ನಾವು ಕಾಣುತ್ತೇವೆ. ಇದರಿಂದಾಗಿ ಅನೇಕರು ಇಂದು ದುರ್ಬೋಧಕರ ವಂಚನೆಗೆ ಒಳಗಾಗುವುದನ್ನು ಕಾಣಬಹುದು. ಉದಾ: ಕೆಲವರು ಸಬ್ಬತ್ತ ಶನಿವಾರ ಆಚರಿಸಬೇಕು ಎಂದು ಹೇಳುತ್ತಾರೆ ಮತ್ತು ಅದನ್ನು ದೃಢಪಡಿಸಲು ಬೇಕಾದ ಅನೇಕ ವಾಕ್ಯಗಳನ್ನು ಸತ್ಯವೇದದಿಂದ ತೋರಿಸುತ್ತಾರೆ. ನಮಗೆ ದೇವರ ವಾಕ್ಯದ ಸ್ಪಷ್ಟವಾದ ತಿಳುವಳಿಕೆ ಇಲ್ಲದಿದ್ದರೆ ನಾವು ಮೋಸ ಹೋಗುವುದು ಖಂಡಿತ. ಶನಿವಾರ ಸಬ್ಬತ್ತನ್ನು ಕರ್ತನು ಇಸ್ರಾಯೇಲರಿಗೆ ಕೊಟ್ಟಿದ್ದಾನೇ ವಿನಹ: ಹೊಸ ಒಡಂಬಡಿಕೆಯ ಸಭೆಗೆ ಅಲ್ಲ. ಕರ್ತನಾದ ಯೇಸುಕ್ರಿಸ್ತನು ಸಬ್ಬತ್ತಿನ ದಿನದಂದು ರೋಗಿಗಳನ್ನು ಗುಣಪಡಿಸುವಂತದ್ದು, ಸೇವೆ ಮಾಡುವಂತದ್ದು ಯೆಹೂದ್ಯರಿಗೆ ಇಷ್ಟವಿರಲಿಲ್ಲ. ಯೇಸುಕ್ರಿಸ್ತನು ಸಬ್ಬತ್ತನ್ನು ಮುರಿಯುತ್ತಾನೆಂದು ಆತನ ಮೇಲೆ ಆರೋಪ ಹೊರಿಸುತ್ತಿದ್ದರು. ಮತ್ತಾ. 12:1–8–, 9–14 ಮೇಲಿನ ವಚನಗಳಲ್ಲಿ ಯೆಹೂದ್ಯರು ಯೇಸುವಿನ ಮೇಲೆ ಆರೋಪ ಹೊರಿಸಲು ನೋಡಿದರು. "ಮನುಷ್ಯಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆಂದು ಹೇಳಿದನು" (ಮತ್ತಾ. 12:8). ಹೊಸ ಒಡಂಬಡಿಕೆಗೆ ನಾವು ಬರುವಾಗ ವಾರದಲ್ಲಿ ಯಾವುದಾದರೂ ಒಂದು ದಿನದಲ್ಲಿ ದೇವರನ್ನು ಆರಾಧಿಸಬಹುದು. "ಒಬ್ಬನು ಒಂದು ದಿನಕ್ಕಿಂತ ಮತ್ತೊಂದು ದಿನವನ್ನು ವಿಶೇಷವೆಂದೆಣಿಸುತ್ತಾನೆ; ಮತ್ತೊಬ್ಬನು ಎಲ್ಲಾ ದಿವಸಗಳನ್ನೂ ವಿಶೇಷವೆಂದೆಣಿಸುತ್ತಾನೆ; ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು. ದಿನವನ್ನು ಗಣ್ಯ ಮಾಡುವವನು ಕರ್ತನಿಗಾಗಿ ಅದನ್ನು ಗಣ್ಯ ಮಾಡುತ್ತಾನೆ" (ರೋಮ. 14:5–6).

**ಆದಿ ಸಭೆಯ ಕ್ರೈಸ್ತ ವಿಶ್ವಾಸಿಗಳು ಯಾವಾಗ ಕೂಡುತ್ತಿದ್ದರು.**

1) ದಿನಾಲೂ ಏಕ ಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಿದ್ದರು (ಅ.ಕೃ. 2:46:47)
2) ಅವರು ಎಲ್ಲಾ ಆತ್ಮೀಕ ಚಟುವಟಿಕೆಗಳಲ್ಲಿ ನಿರತರಾಗಿದ್ದರು (ಅ.ಕೃ. 2:42).
3) ವಾರದಲ್ಲಿ ಯಾವುದೋ ಒಂದು ದಿನ ದೇವಾಲಯಕ್ಕೆ ಪ್ರಾರ್ಥನೆಗೆ ಹೋದರು (ಅ.ಕೃ. 3:1).
4) ಸೊಲೊಮೋನನ ಮಂಟಪದಲ್ಲಿ ಒಗ್ಗಟ್ಟಾಗಿ ಕೂಡಿ ಬರುತ್ತಿದ್ದರು (ಅ.ಕೃ. 5:12).
5) ವಾರದ ಮೊದಲನೆಯ ದಿನ ಕೂಡಿ ಬಂದರು (ಭಾನುವಾರ) (ಅ.ಕೃ. 20:7).
6) ವಾರದ ಮೊದಲನೆಯ ದಿನ ಸೇವೆಗಾಗಿ ಹಣವನ್ನು ಗಂಟು ಮಾಡಲು ಪೌಲನು ಹೇಳಿದನು (ಅ.ಕೃ. 16:2).

ನಮಗೆ ದೇವರ ವಾಕ್ಯದ ಕುರಿತು ಸ್ಪಷ್ಟವಾದ ತಿಳುವಳಿಕೆ ಇರಬೇಕು. ಇನ್ನು ಕೆಲವರು ಹಂದಿಮಾಂಸ ತಿನ್ನಬಾರದು ಎಂದು ಹೇಳುತ್ತಾರೆ. ಯಾರಿಗೆ ತಿನ್ನಲು ಇಷ್ಟವಿಲ್ಲವೋ ಅವರು ತಿನ್ನಬೇಡಿ, ತಿನ್ನುವವರಿಗೆ ಅಡ್ಡಿ ಮಾಡಬೇಡಿ. ತಿನ್ನಲು ಮನಸ್ಸಿಲ್ಲದವರಿಗೆ ಒತ್ತಾಯ ಮಾಡಬೇಡಿ. ಪ್ರತಿಯೊಬ್ಬರಿಗೂ ಏನು ತಿನ್ನಬೇಕು? ಏನು ತಿನ್ನ ಬಾರದು ಅದರ ಕುರಿತು ಸ್ವಾತಂತ್ರ್ಯವಿದೆ ಆದರೆ ದೇವರ ವಾಕ್ಯದಲ್ಲಿ ಹೊಸ ಒಡಂಬಡಿಕೆಯಲ್ಲಿ ನಾವು ಯಾವ ಮಾಂಸವನ್ನು ತಿನ್ನಬಹುದೆಂದು ಬರೆಯಲ್ಪಟ್ಟಿದೆ. ಮಾಂಸ ತಿನ್ನಲು ಇಷ್ಟವಿರುವವರು ಯಾವುದೇ ಮಾಂಸವನ್ನು ಹೊಸ ಒಡಂಬಡಿಕೆಯಲ್ಲಿ ತಿನ್ನಬಹುದು. "ಪ್ರತಿಯೊಬ್ಬನು ತನ್ನ ಹಿತವನ್ನು ಚಿಂತಿಸದೆ ಪರಹಿತವನ್ನು ಚಿಂತಿಸಲಿ. ಕಟುಕರ ಅಂಗಡಿಯಲ್ಲಿ ಮಾರುವಂಥದು ಏನಿದ್ದರೂ ಅದನ್ನು ಮನಸ್ಸಿನಲ್ಲಿ ಸಂಶಯ ಹುಟ್ಟಿಸುವ ವಿಚಾರಣೆಮಾಡದೆ ತಿನ್ನಿರಿ. ಭೂಮಿಯೂ ಅದರಲ್ಲಿರುವ ಸಮಸ್ತವೂ ಕರ್ತನದಾಗಿದೆಯಲ್ಲವೇ" (1 ಕೊರಿ. 10:25–26). (ಅ.ಕೃ. 10:12–15, ಮಾರ್ಕ. 7:18–19, 1 ತಿಮೊ. 4:3–5). ಪ್ರತಿಯೊಂದು ವಿಚಾರದಲ್ಲೂ ನಮಗೆ ದೇವರ ವಾಕ್ಯದ ತಿಳುವಳಿಕೆ ಇದ್ದರೆ ಯಾರೂ ನಮ್ಮನ್ನು ಮೋಸಪಡಿಸಲು ಸಾಧ್ಯವಿಲ್ಲ.

ಯೇಸು ನಾಮದವರ ಉಪದೇಶಗಳ ಕುರಿತು ನಮಗೆ

ಯೆಹೋವನು ಯೆರೂಸಲೇಮನ್ನು ವಿಮೋಚಿಸಿ ತನ್ನ ಜನರನ್ನು ಸಂತೈಸಿದ್ದಾನೆ (ಯೆಶಾ. 52:9).

ತಿಳುವಳಿಕೆ ಇರಬೇಕು, ಅವರ ಉಪದೇಶಗಳೇನು ?

1) ಮತ್ತಾ. 28:18–19 ರಲ್ಲಿರುವ ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಬೇಕು ಎಂದು ಕರ್ತನಾದ ಯೇಸುಕ್ರಿಸ್ತನು ಹೇಳಿದ ಮೂರು ಹೆಸರುಗಳಲ್ಲ, ಪದವಿಗಳಾಗಿವೆ ಅಂದರೆ ತಂದೆ ಮಗ ಪವಿತ್ರಾತ್ಮ ವಿವಿಧ ಮೂರು ಹೆಸರುಗಳಲ್ಲ, ಅವು ಪದವಿಯಾಗಿದೆ ಎಂದು ತ್ರಯೇಕತ್ವವನ್ನು ಅಲ್ಲಗಳೆಯುತ್ತಾರೆ.

2) ಅಪೊಸ್ತಲರ ಕೃತ್ಯದಲ್ಲಿ ಶಿಷ್ಯರು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಕೊಟ್ಟರು ಆದ್ದಕಾರಣ ನಾವು ಕೂಡ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಕೊಡಬೇಕು.

3) ಕರ್ತನಾದ ಯೇಸುಕ್ರಿಸ್ತನ ಜನನ ಪರಿಶುದ್ಧಾತ್ಮನ ಮೂಲಕವಾಯಿತು ಎಂದು ಸತ್ಯವೇದ ಹೇಳುತ್ತದೆ. ಆದ್ದಕಾರಣ ಯೇಸುಕ್ರಿಸ್ತನ ತಂದೆ ಪರಿಶುದ್ಧಾತ್ಮನೇ ತಂದೆಯಾದ ದೇವರೋ ಎಂದು ಪ್ರಶ್ನೆ ಕೇಳಿ ಕ್ರೈಸ್ತ ವಿಶ್ವಾಸಿಗಳನ್ನು ಗಲಿಬಿಲಿ ಗೊಳಿಸುತ್ತಾರೆ ಮಾತ್ರವಲ್ಲ, ತಂದೆ ಮಗ ಪವಿತ್ರಾತ್ಮನ ಹೆಸರು ಯೇಸು ಆಗಿದ್ದಾನೆಂದು ತ್ರಯೇಕತ್ವವನ್ನು ಅಲ್ಲಗಳೆಯುತ್ತಾರೆ.

1) ಮತ್ತಾ. 28:18–19 ರಲ್ಲಿರುವ ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಬೇಕು ಎಂದು ಕರ್ತನಾದ ಯೇಸುಕ್ರಿಸ್ತನು ಹೇಳಿದ ಮೂರು ಹೆಸರುಗಳಲ್ಲ, ಅವು ಪದವಿಗಳಾಗಿವೆ ಎಂದು ತ್ರಯೇಕತ್ವವನ್ನು ಅಲ್ಲಗಳೆಯುತ್ತಾರೆ. ಅವರು ಹೇಳುವುದು ತಂದೆ ಹೆಸರಲ್ಲ ಅದು ಪದವಿ, ಮಗ ಹೆಸರಲ್ಲ ಅದು ಪದವಿ, ಪವಿತ್ರಾತ್ಮ ಹೆಸರಲ್ಲ ಅದು ಪದವಿ ಎಂದು ವಾದಿಸುತ್ತಾರೆ.

ಯೇಸು ಮತ್ತಾ. 28:18–19 ರಲ್ಲಿ ತಂದೆ ಮಗ ಪವಿತ್ರಾತ್ಮ ಎಂದು ಹೇಳಲು ಕಾರಣವೇನು?

ಸತ್ಯವೇದವನ್ನು ಸರಿಯಾಗಿ ನಾವು ಅಭ್ಯಾಸ ಮಾಡಿದರೆ ದೇವರ ತ್ರಯೇಕತ್ವವನ್ನು ಗಮನಿಸಲು ಸಾಧ್ಯ. ಮೇಲಿನ ಎಲ್ಲಾ ಪ್ರಶ್ನೆಗಳನ್ನು ನಾವು ಸಂಕ್ಷಿಪ್ತವಾಗಿ ಧ್ಯಾನಿಸೋಣ ಮತ್ತು ಸರಿಯಾದ ಉತ್ತರವನ್ನು ಕಂಡುಕೊಳ್ಳೋಣ.

ದುರ್ಬೋಧನೆಗಳು ಯಾವ ಮೂಲಜಿಲ್ಲದೆ ಸತ್ಯವೇದದಲ್ಲಿರುವ ದೈವತ್ವವನ್ನು ವಿರೋಧಿಸುತ್ತಿವೆ. ಕರ್ತನಾದ ಯೇಸುಕ್ರಿಸ್ತನ ವ್ಯಕ್ತಿತ್ವ ಮತ್ತು ದೈವತ್ವವನ್ನು ವಿರೋಧಿಸುವಂತಹ "ಯೆಹೋವನ ಸಾಕ್ಷಿಗಳು" ಹೇರಳವಾಗಿದ್ದಾರೆ. ಯೇಸು ನಾಮದವರು ದೇವಿಕ ತ್ರಯೇಕತ್ವವನ್ನು ವಿರೋಧಿಸುವುದೆಂದರೆ ಆತನ ನರಾವತಾರದ ಮತ್ತು ಪಾಪ ಪರಿಹಾರದ ಬಗ್ಗೆ ತಪ್ಪಾದ ಅಭಿಪ್ರಾಯವಿದ್ದಂತೆಯೇ. ಹಿಂದಿನ ಕಾಲಗಳಲ್ಲಿದ್ದಂತೆ ಈಗಲೂ ಸೈತಾನನು ದೇವರಿಗೆ ವಿರೋಧವಾಗಿ ಹೋರಾಡುತ್ತಿದ್ದಾನೆ. ಎಲ್ಲಾ ದುರ್ಬೋಧನೆಗಳ ಗುಂಪುಗಳು ಕ್ರೈಸ್ತತ್ವದಿಂದಲೇ ಬಂದು ತ್ರಯೇಕತ್ವವನ್ನು ವಿರೋಧಿಸುವುದಾಗಿದೆ. ಹೇಗೆ ಸೈತಾನನು ಗರ್ವದಿಂದಲೂ, ಅಹಂಕಾರದಿಂದಲೂ ಉಬ್ಬಿಕೊಂಡು ದೇವರ ವಿರುದ್ಧವಾದ ದ್ವೇಷದಿಂದ ದೇವಜನರಾದ ನಿಜ ಕ್ರೈಸ್ತ ವಿಶ್ವಾಸಿಗಳನ್ನು ನಾಶಪಡಿಸುವಂತಹ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾನೆ. ಆದುದರಿಂದ ಕ್ರೈಸ್ತ ವಿಶ್ವಾಸಿಗಳು ಸೈತಾನನ ತಂತ್ರಗಳಲ್ಲಿ ಬಿದ್ದು ಹೋಗದಂತೆ ಅವರನ್ನು ಸತತವಾಗಿ ಎಚ್ಚರಿಸಬೇಕಾಗಿದೆ. 2 ಕೊರಿ. 2:11 ರಲ್ಲಿ ಪೌಲನು ಸೈತಾನನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದು ಅವನ ಕುತಂತ್ರಗಳನ್ನು ಅರಿಯದವರಲ್ಲವಲ್ಲ ಎಂದು ಎಚ್ಚರಿಸುತ್ತಿದ್ದಾನೆ. ಯಾರು ದೇವರ ತ್ರಯೇಕತ್ವವನ್ನು ಅಲ್ಲಗಳೆಯುತ್ತಾರೋ ಅವರು ಕ್ರೈಸ್ತ ವಿರೋಧಿಯಾಗಿದ್ದಾರೆ. "ಯೇಸುವು ಕ್ರಿಸ್ತನಲ್ಲ ಎನ್ನುವವನು ಸುಳ್ಳುಗಾರನಲ್ಲವಾದರೆ ಸುಳ್ಳುಗಾರನು ಬೇರೆ ಎಲ್ಲಿದ್ದಾನೆ? ಯಾವನಾದರೂ ತಾನು ತಂದೆಯನ್ನೂ ಮಗನನ್ನೂ ಅರಿಯೆವು ಎಂದು ಹೇಳಿದರೆ ಅವನೇ ಕ್ರಿಸ್ತ ವಿರೋಧಿ. ತಾನು ದೇವರ ಮಗನಿಗೆ ಸೇರಿದವನಲ್ಲವೆನ್ನುವವನು ತಂದೆಗೆ ಸೇರಿದವನಲ್ಲ; ತಾನು ಮಗನಿಗೆ ಸೇರಿದವನೆಂದು ಒಪ್ಪಿಕೊಳ್ಳುವವನು ತಂದೆಗೂ ಸೇರಿದವನಾಗಿದ್ದಾನೆ. ನೀವಂತೂ ಯಾವ ಬೋಧನೆಯನ್ನು ಮೊದಲಿನಿಂದ ಕೇಳಿದ್ದೀರೋ ಅದು ನಿಮ್ಮಲ್ಲಿ ನೆಲೆಗೊಂಡಿರಲಿ. ಮೊದಲಿನಿಂದ ನೀವು ಕೇಳಿದ ಬೋಧನೆಯು ನಿಮ್ಮಲ್ಲಿ ನೆಲೆಗೊಂಡಿದ್ದರೆ ನೀವು ಸಹ ಮಗನಲ್ಲಿಯೂ ತಂದೆಯಲ್ಲಿಯೂ ನೆಲೆಗೊಂಡಿರುತ್ತೀರಿ" (1 ಯೋಹಾ. 2:22–24). ಯೇಸು ನಾಮದವರು ತಂದೆ, ಮಗ, ಪವಿತ್ರಾತ್ಮ ಹೆಸರುಗಳಲ್ಲವೆಂದು ಅವು ಪದವಿಗಳೆಂದು ವಾದಿಸುವವರಾಗಿದ್ದು, ಯೇಸುವೇ ತಂದೆ, ಯೇಸುವೆ ಪವಿತ್ರಾತ್ಮನೆಂದು ವಾದಿಸಿ ದೇವರ ತ್ರಯೇಕತ್ವವನ್ನು ಅಲ್ಲಗಳೆಯುತ್ತಾರೆ. ಯೆಹೋವ ಸಾಕ್ಷಿಯವರು ತಂದೆಯಾದ ದೇವರು ಒಂದೇ ವ್ಯಕ್ತಿಯೆಂದು ವಾದಿಸಿ ಯೇಸುವಿನ ದೈವತ್ವವನ್ನು ಅಲ್ಲಗಳೆಯುವುದನ್ನು ನಾವು ಕಾಣಬಹುದು. ತನ್ನ ಪ್ರಾರ್ಥನೆಯನ್ನು ಕೇಳಲು ಯಾರು ಇಲ್ಲದಿದ್ದ ಮೇಲೆ ಯಾಕೆ

ಯೆಹೋವನು ನಿಮಗೆ ಮುಂಬಲವಾಗಿ ಮುಂದರಿಯುವನು, ಇಸ್ರಾಯೇಲಿನ ದೇವರು ನಿಮಗೆ ಹಿಂಬಲವಾಗಿಯೂ ಇರುವನು (ಯೆಶಾ. 52:12).

ಯೇಸುವು ಆಕಾಶದ ಕಡೆಗೆ ದೃಷ್ಟಿಯಿಟ್ಟು ತಂದೆಯೇ ಎಂದು ದೇವರನ್ನು ನೋಡಿ ಪ್ರಾರ್ಥಿಸಿದನು ಎಂದು ಈ ಯೇಸು ನಾಮದವರಿಗೆ ಕೇಳುವುದಾದರೆ ನಾವು ಹೇಗೆ ಪ್ರಾರ್ಥಿಸಬೇಕೆಂದು ಕರ್ತನಾದ ಯೇಸುಕ್ರಿಸ್ತನು ಮಾದರಿ ತೋರಿಸಿದ್ದಾನೆಂದು ಹೇಳುತ್ತಾರೆ. ಹಾಗದರೆ ಕರ್ತನಾದ ಯೇಸುಕ್ರಿಸ್ತನು ಇಲ್ಲಿದಂತಹ ವ್ಯಕ್ತಿಯನ್ನು ನೋಡಿ ಪ್ರಾರ್ಥಿಸಲು ಹೇಳಿರುವುದನ್ನು ಸತ್ಯವೇದದಲ್ಲಿ ನಾವು ಎಲ್ಲಿಯಾದರೂ ಓದಿದ್ದೇವಾ? ಯೇಸುಕ್ರಿಸ್ತನು ಭೂಲೋಕದಲ್ಲಿದ್ದಾಗ ಯಾವತ್ತಾದರೂ ತನ್ನ ದೃಷ್ಟಿಯನ್ನು ಪರಲೋಕದಲ್ಲಿರುವ ತನ್ನ ವ್ಯಕ್ತಿತ್ವದ ಕಡೆಗೆ ಇರಿಸಿ ತನ್ನಷ್ಟಕ್ಕೆ ತಾನೇ ಪ್ರಾರ್ಥನೆ ಮಾಡಿದನಾ? ಬುದ್ಧಿ ಇರುವ ಒಬ್ಬ ವ್ಯಕ್ತಿಯು ಸುವಾರ್ತೆಯ ಪುಸ್ತಕಗಳನ್ನು ಓದಿದ ನಂತರವೂ ತ್ರೈಯೇಕತ್ವವನ್ನು ವಿರೋಧಿಸುವುದು ಹೇಗೆ ಎಂದು ಆಶ್ಚರ್ಯವಾಗುತ್ತದಲ್ಲವೇ! ಈ ಗುಂಪಿನವರಲ್ಲೇ ಅನೇಕ ಗಲಿಬಿಲಿಗಳಿವೆ ಇದರಲ್ಲಿ ಕೆಲವರು ಯೇಸುವಿನ ಹೆಸರನಲ್ಲಿ ಮಾತ್ರ ದೀಕ್ಷಾಸ್ನಾನ ಹೊಂದಿದ್ದೇನೆಂದು ಒಪ್ಪಿಕೊಳ್ಳುವುದಿಲ್ಲ ಆದರೆ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಬೇಕೆಂದು ಹೇಳುತ್ತಾರೆ ಆದರೆ ಸತ್ಯವೇದದಲ್ಲಿರುವ ಕರ್ತನಾದ ಯೇಸುಕ್ರಿಸ್ತನು ಮತ್ತು ಯೇಸುಕ್ರಿಸ್ತನು ಒಬ್ಬನೇ ವ್ಯಕ್ತಿಯಾಗಿರುವುದರಿಂದ ಇವರದ್ದು ಜನರಲ್ಲಿ ಕ್ರೈಸ್ತ ವಿಶ್ವಾಸಿಗಳಲ್ಲಿ ಕೇವಲ ಗಲಿಬಿಲಿಯನ್ನು ಉಂಟುಮಾಡುವುದೇ ಉದ್ದೇಶವಾಗಿದೆ.

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ನನ್ನನ್ನು ಆಶ್ರಯಿಸುವವನೋ ದೇಶವನ್ನನುಭವಿಸಿ ನನ್ನ ಪರಿಶುದ್ಧ ಪರ್ವತವನ್ನು ಬಾಧ್ಯವಾಗಿ ಹೊಂದುವನು (ಯೆಶಾ. 57:13).

# ಆಂತರ್ಯದ ಸೌಂದರ್ಯ

**"ಜಡೆ ಹೆಣೆದುಕೊಳ್ಳುವುದು ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವುದು ವಸ್ತ್ರಗಳನ್ನು ಧರಿಸಿಕೊಳ್ಳುವುದು ಈ ಮೊದಲಾದ ಹೊರಗಣ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು. ಸಾತ್ವಿಕವಾದ ಶಾಂತ ಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ"** (1 ಪೇತ್ರ. 3:4–5).

ಸಾಮಾನ್ಯವಾಗಿ ನಾವುಗಳು ಹೊರಗಡೆ ಶೃಂಗರಿಸಿಕೊಂಡು ಸುಂದರವಾಗಿ ಕಾಣಿಸಿಕೊಳ್ಳಲು ಪ್ರಯತ್ನಿಸುವುದುಂಟು, ಜನರನ್ನು ಲೋಕವನ್ನು ಮೆಚ್ಚಿಸಲು ಹೊರಗಿನ ಸೌಂದರ್ಯಕ್ಕೆ ಹೆಚ್ಚಿನ ಗಮನ ಕೊಡುವುದು, ಮಾಡುವುದುಂಟು ಆದರೆ ದೇವರು ಹೊರಗಿನ ಸೌಂದರ್ಯವನ್ನು ನೋಡದೆ ಆಂತರ್ಯದ ಸೌಂದರ್ಯವನ್ನು ನೋಡಿ ಬಹಳ ಪ್ರತಿಫಲ ಕೊಡುವನು. **"ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ"** (1 ಸಮು. 16:7). **ಮನುಷ್ಯನ ನಡತೆಯೆಲ್ಲಾ ಅವನ ಸ್ವಂತ ದೃಷ್ಟಿಗೆ ಶುದ್ಧವಾಗಿರುತ್ತದೆ ಆದರೆ ದೇವರು ಅಂತರಂಗವನ್ನು ಪರೀಕ್ಷಿಸುವನು** (ಜ್ಞಾನೋ. 16:2). **"ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲ ಕೊಡುವನು"** (ಮತ್ತಾ. 6:6). ನಮ್ಮ ಆಂತರ್ಯವನ್ನು ದೇವರ ಮುಂದೆ ಯಾವ ರೀತಿ ಸೌಂದರ್ಯವನ್ನಾಗಿ ಮಾಡಬಹುದು ಎಂಬುವುದನ್ನು ಧ್ಯಾನಿಸೋಣವೇ?

**ವರ್ಯಸ್ಕರ ಸ್ವರ**

1) **ಆಂತರ್ಯದಲ್ಲಿ ಹೊಸಬರಾಗಿರುವುದರಿಂದ ನಮ್ಮ ಅಂತರ್ಯದ ಸೌಂದರ್ಯ ಹೆಚ್ಚುವುದು (ಎಫೆ. 4:23):** ನಮ್ಮ ಹಳೇ ಜೀವಿತ (ಕ್ರಿಸ್ತನಲ್ಲಿಲ್ಲದ ಜೀವಿತ) ಮೋಸಕರವಾದ ದುರಾಶೆಗಳಿಂದ ಕೆಟ್ಟು ಹೋಗುವಂತದ್ದು ಅದರ ಬದಲಾಗಿ ಪಶ್ಚಾತ್ತಾಪದೊಂದಿಗೆ ದೇವರ ಕಡೆಗೆ ತಿರುಗಿದ್ದಾಗ ನೂತನ ಸ್ವಭಾವವನ್ನು ಹೊಂದಿಕೊಳ್ಳುವವರಾಗಿರುತ್ತೇವೆ. ಆ ನೂತನ ಸ್ವಭಾವವೇ ದೇವರು ನಮ್ಮಿಂದ ಎದುರು ನೋಡುತ್ತಾನೆ. ಮನುಷ್ಯನ ಒಳಗಡೆಯಿಂದ 12 ವಿಧವಾದ ಕಠೋರವಾದ ಪಾಪಗಳು ಹೊರಡಿ ಮನುಷ್ಯನನ್ನು ಹೊಲೆ ಮಾಡುತ್ತದೆ. ಇವು ಮನುಷ್ಯನನ್ನು ಕೆಡಿಸುತ್ತವೆ ಮಾತ್ರವಲ್ಲದೆ ದೇವರಿಂದ ಮನುಷ್ಯನನ್ನು ದೂರಮಾಡುತ್ತವೆ. ಮಾರ್ಕ. 7:20–21 ರಲ್ಲಿ ಓದಿಕೊಳ್ಳುವ "ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ, ಕಳ್ಳತನ ಮನುಷ್ಯನನ್ನು ಹೊಲೆ ಮಾಡುತ್ತದೆ. ಕೆಲವರು ಪ್ರೈಸ್ ದ ಲಾಡ್ ಪ್ರೈಸ್ ದ ಲಾಡ್ ಎಂದು ಬಾಯಿಂದ ಅಭಿನಂದಿಸಿದ್ದರೂ ಒಳಗಡೆ ಮೂಟೆಗಟ್ಟಲೆ ದ್ವೇಷ ಇಟ್ಟುಕೊಳ್ಳುತ್ತಾರೆ. ಚೇಳು ಎರಡು ಮುಂದಿನ ಕೈಗಳನ್ನು ಸೇರಿಸಿದರೂ ವಿಷದ ಕೊಂಡಿಯಿಂದ, ಬಾಲದಿಂದ, ಹಿಂದಿನಿಂದ ಒಡೆಯುವ ಹಾಗೆ ಮಾಡುವರು. ಹೊಟ್ಟೆಯಲ್ಲಿ ಹಗೆಯನ್ನಿಟ್ಟು ಕೊಂಡವನು ಸುಳ್ಳುಗಾರ (ಜ್ಞಾನೋ. 10:18). ದೇವರ ವಾಕ್ಯ ಹೇಳುತ್ತದೆ, "ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವುದು" (ಲೂಕ. 6:45). "ಯಥಾರ್ಥ ಹೃದಯವುಳ್ಳವರಿಗೆ ಸಂತೋಷ ಬಿತ್ತಲ್ಪಟ್ಟಿರುವುದು" (ಕೀರ್ತ. 97:11). ಕೆಲವರು ಮುಖದಲ್ಲಿ ಬಲವಂತವಾಗಿ ಸಂತೋಷತರಲು ಪ್ರಯತ್ನಿಸುವರು ಆದರೆ ಹೃದಯದಲ್ಲಿ ದ್ವೇಷ, ನಿರಾಶೆ, ಸೋಲು ಶಾಪವನ್ನಿಟ್ಟುಕೊಳ್ಳುವರು. "ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೊ" (ಜ್ಞಾನೋ. 4:23). "ನನ್ನ ಹೃದಯವನ್ನು ಶುದ್ಧಿಮಾಡಿಕೊಂಡಿದ್ದೇನೆ ನನ್ನ ಪಾಪವನ್ನು ಕಳೆದುಕೊಂಡು ನಿರ್ಮಲವಾಗಿದ್ದೇನೆ ಎಂದು ಯಾರು ಹೇಳಬಲ್ಲರು" (ಜ್ಞಾನೋ. 20:9). "ಹೃದಯ ಶುದ್ಧಿಯನ್ನಪೇಕ್ಷಿಸುವ ಸವಿ ಮಾತಾಡುವ ಮನುಷ್ಯನಿಗೆ ರಾಜನ ಸ್ನೇಹವು ದೊರೆಯುವುದು" (ಜ್ಞಾನೋ. 22:11). ಮಂತ್ರವಾದಿಯಾದ ಸಿಮೋನನು ದೀಕ್ಷಾಸ್ನಾನವನ್ನು ತೆಗೆದುಕೊಂಡಿದ್ದರೂ ಅವನ ಹೃದಯದಲ್ಲಿ ಬದಲಾವಣೆ ಹೊಂದಿರಲಿಲ್ಲ. ಅಪೋಸ್ತಲರು ಅನೇಕರಿಗೆ ಕೈಗಳನ್ನಿಡುವಾಗ ಅಭಿಷೇಕವಾಗುವುದನ್ನು ನೋಡಿ ಹಣದಿಂದ ಅದನ್ನು ತಾನು ಹೊಂದಲು ಪ್ರಯತ್ನಿಸಿದ್ದಾಗ ಪೇತ್ರನು ಅವನನ್ನು ಗದರಿಸಿದನು. "ನಿನ್ನ ಬೆಳ್ಳಿಯು ನಿನ್ನ ಕೂಡ ಹಾಳಾಗಿ ಹೋಗಲಿ. ದೇವರ ವರವನ್ನು ಹಣಕ್ಕೆ ಕೊಂಡುಕೊಳ್ಳಬಹುದೆಂದು ಭಾವಿಸುತ್ತಿಯೋ ನಿನ್ನ ಹೃದಯವು ದೇವರ ಮುಂದೆ ಸರಿಯಲ್ಲ" (ಅ.ಕೃ. 8:20–21). ದೇವ ಮಗುವೆ, ನಿನ್ನಲ್ಲಿ ವಿಧೇಯತೆ, ತಗ್ಗಿಸಲ್ಪಡುವಿಕೆ ಇಲ್ಲದಿರುವಲ್ಲಿ ಪವಿತ್ರಾತ್ಮನು ನಿನ್ನಲ್ಲಿ ನೆಲೆಗೊಳ್ಳಲು ಬಯಸುವುದಿಲ್ಲ. ಅವಿಧೇಯತೆಯು ಮಂತ್ರ ತಂತ್ರಕ್ಕಿಂತಲೂ ಕೆಟ್ಟದ್ದು (1 ಸಮು. 15:22–23). ಕೆಲವರು ಸಭೆಯಲ್ಲಿ ದೇವರಿಗೆ, ಆತನ ವಾಕ್ಯಕ್ಕೆ ಅವಿಧೇಯರಾಗಿ ದೊಡ್ಡ ದೊಡ್ಡ ಮಂತ್ರವಾದಿಗಳಾಗಿಯೇ ಸಭೆಯೊಳಗೆ ಇರುವುದರಿಂದ ನಿಜವಾದ ಮಂತ್ರವಾದಿಗಳು ರಕ್ಷಣೆ ಹೊಂದಲು ತಡೆಯಾಗಿರುತ್ತಾರೆ.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

ಅವರೆಲ್ಲರನ್ನೂ ನಾನು ನನ್ನ ಪವಿತ್ರಪರ್ವತಕ್ಕೆ ಬರಮಾಡಿ
ನನ್ನ ಪ್ರಾರ್ಥನಾಲಯದಲ್ಲಿ ಉಲ್ಲಾಸಗೊಳಿಸುವೆನು (ಯೆಶಾ. 56:7).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟ್ರರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091 820 2589070, 0091 820 200 2781
E-mial: dgmofficial@gmail.com

ದೂರದವನಿಗೂ ಸಮೀಪದವನಿಗೂ ಕ್ಷೇಮವಿರಲಿ, ಸುಕ್ಷೇಮವಿರಲಿ,
ನಾನು ಅವರನ್ನು ಸ್ವಸ್ಥಮಾಡುವೆನು (ಯೆಶಾ. 57:19).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಮಹಿಳೆಯರ ಸ್ವರ

9) **ಕ್ರೈಸ್ತ ವಿಶ್ವಾಸಿಗಳು ಮದುವೆಗಿಂತ ಮುಂಚೆ ದೈಹಿಕ ಸಂಬಂಧ ಬೆಳೆಸಬಾರದು:** "ದಾವೀದನ ಮಗನಾದ ಅಬ್ಷಾಲೋಮನಿಗೆ ತಾಮಾರಳೆಂಬ ಬಹು ಸುಂದರಿಯಾದ ಒಬ್ಬ ತಂಗಿಯಿದ್ದಳು. ದಾವೀದನ ಮಗನಾದ ಅಮ್ನೋನನು ಆಕೆಯನ್ನು ಮೋಹಿಸಿದನು" (2 ಸಮು. 13:1). "ಆದರೆ ಕ್ರೈಸ್ತಸಹೋದರನೆನಿಸಿಕೊಂಡವನು ಜಾರನಾದರೂ ಲೋಭಿಯಾದರೂ ವಿಗ್ರಹಾರಾಧಕನಾದರೂ ಬೈಯುವವನಾದರೂ ಕುಡಿಕನಾದರೂ ಸುಲುಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟಮಾಡಲೂ ಬಾರದು ಎಂದು ಬರೆದಿದ್ದೆನು" (1 ಕೊರಿ. 5:11). "ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? ಮೋಸ ಹೋಗಬೇಡಿರಿ, ಜಾರರು ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು ಕಳ್ಳರು ಲೋಭಿಗಳು ಕುಡಿಕರು ಬೈಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ" (1 ಕೊರಿ. 6:9–10).

v) **ತಮ್ಮನ್ನು ಎಲ್ಲಾ ಇಕ್ಕಟ್ಟುಗಳಿಂದ ಬಿಡಿಸಿದ ದೇವರನ್ನು ಮರೆತರು: "ಆದರೆ ಯೆಶುರೂನು ಚೆನ್ನಾಗಿ ತಿಂದು ಕೊಬ್ಬಿ ಅಗಡಾಗಿ ತನ್ನನ್ನು ಸೃಷ್ಟಿಸಿದ ದೇವರನ್ನು ಬಿಟ್ಟು ತನ್ನ ಆಶ್ರಯದುರ್ಗವನ್ನು ತಿರಸ್ಕರಿಸಿತು"** (ಧರ್ಮೋ. 32:15). ದೇವರು ಅವರನ್ನು ಐಗುಪ್ತದ ದಾಸತ್ವಗಳಿಂದ ಬಿಡಿಸಿ ಹಾಲೂ ಜೇನೂ ಹರಿಯುವಂತಹ ಕಾನಾನ್ ದೇಶಕ್ಕೆ ನಡಿಸಿದನು. ದಾರಿ ಮಧ್ಯದಲ್ಲಿ ಅನೇಕ ದುರ್ಘಟನೆಗಳು ನಡೆದರೂ ಕರ್ತನು ಅವರ ಸಂಗಡ ಇದ್ದದ್ದರಿಂದ ಅವರಿಗೇನೂ ಸಮಸ್ಯೆಗಳು ಸಂಭವಿಸಲಿಲ್ಲ. ದೇವರು ಅವರಿಗೆ ಅನೇಕ ವಿಧವಾದ ಎಚ್ಚರಿಕೆಗಳನ್ನು ಕೊಟ್ಟಿದ್ದನ್ನು, ತಮ್ಮನ್ನು ಬಿಡಿಸಿ ನಡೆಸಿದಂಥ ದೇವರನ್ನು ಅವರು ಯಾವತ್ತು ಮರೆಯಬಾರದಾಗಿತ್ತು.

**ದೇವರು ಅವರಿಗೆ ಕೊಟ್ಟ ಎಚ್ಚರಿಕೆಗಳು :–**

1) **"ಯೆಹೋವನು ಐಗುಪ್ತ್ಯರನ್ನು ಸಂಹರಿಸಿದಾಗ ಐಗುಪ್ತ್ಯ ದೇಶದಲ್ಲಿದ್ದ ಇಸ್ರಾಯೇಲ್ಯರ ಮನೆಗಳಲ್ಲಿ ಪ್ರವೇಶಿಸದೆ ಮುಂದಕ್ಕೆ ದಾಟಿ ನಮ್ಮವರನ್ನು ಉಳಿಸಿದದರಿಂದ ನಾವು ಯೆಹೋವನ ಪಸ್ಕವೆಂಬ ಈ ಯಜ್ಞಾಚಾರವನ್ನು ನಡಿಸುವದುಂಟು ಎಂದು ಹೇಳಬೇಕು ಅಂದನು"** (ವಿಮೋ. 12:27).

2) **"ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ಆತನ ದೃಷ್ಟಿಗೆ ಸರಿ ಬೀಳುವದನ್ನು ಮಾಡಿ ಆತನ ಆಜ್ಞೆಗಳಿಗೆ ವಿಧೇಯರಾಗಿದ್ದು ಆತನ ಕಟ್ಟಳೆಗಳನ್ನೆಲ್ಲಾ ಅನುಸರಿಸಿ ನಡೆದರೆ ನಾನು ಐಗುಪ್ತ್ಯರಿಗೆ ಉಂಟು ಮಾಡಿದ ವ್ಯಾಧಿಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವದಿಲ್ಲ. ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು"** (ವಿಮೋ. 15:26).

3) **"ನಾನು ಐಗುಪ್ತ್ಯರಿಗೆ ಏನು ಮಾಡಿದೆನೋ, ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೆ. ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯಜನರಾಗುವಿರಿ; ಸಮಸ್ತ ಭೂಮಿಯೂ ನನ್ನದಷ್ಟೆ. ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ. ಇವೇ ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದ ಮಾತುಗಳು ಎಂದನು"** (ವಿಮೋ.19:4–6).

4) **"ನಾನು ಈಗ ನಿಮಗೆ ಬೋಧಿಸುವ ನಿಮ್ಮ ದೇವರಾದ ಯೆಹೋವನ ಆಜ್ಞಾವಿಧಿನಿರ್ಣಯಗಳನ್ನು ಕೈಕೊಳ್ಳದವರೂ ಆತನನ್ನು ಮರೆಯುವವರೂ ಆಗಬೇಡಿರಿ, ನೋಡಿರಿ"** (ಧರ್ಮೋ. 8:11).

5) **"ನೀವು ಹೊಟ್ಟೆತುಂಬಾ ಉಂಡು ಸುಖವಾಗಿದ್ದು ಒಳ್ಳೇ ಮನೆಗಳನ್ನು ಕಟ್ಟಿಸಿಕೊಂಡು ಅವುಗಳಲ್ಲಿ ವಾಸವಾಗಿರುವ ಕಾಲದಲ್ಲಿ ನಿಮ್ಮ ದನಗಳೂ ಆಡುಕುರಿಗಳೂ ನಿಮ್ಮ ಬೆಳ್ಳಿಬಂಗಾರವೂ ಆಸ್ತಿಯೆಲ್ಲವೂ ಹೆಚ್ಚುತ್ತಿರುವಾಗ ಒಂದು ವೇಳೆ ನೀವು ಮದಿಸಿ ನಿಮ್ಮ ದೇವರಾದ ಯೆಹೋವನನ್ನು ಮರೆತೀರಿ"** (ಧರ್ಮೋ. 8:12–14).

6) "ಮನಸ್ಸಿನೊಳಗೆ ಈ ಭಾಗ್ಯವು ನಮ್ಮ ಸಾಮರ್ಥ್ಯ ಸಾಹಸಗಳಿಂದಲೇ ನಮಗುಂಟಾಯಿತು ಅಂದು ಕೊಂಡೀರಿ. ಆದದರಿಂದ ನಿಮ್ಮ ದೇವರಾದ ಯೆಹೋವನೇ ತಾನು

ನಿಮ್ಮ ಪಿತೃಗಳಿಗೆ ಪ್ರಮಾಣಪೂರ್ವಕವಾಗಿ ಮಾಡಿದ ವಾಗ್ದಾನವನ್ನು ಈಗ ನಿಮ್ಮ ಅನುಭವಕ್ಕೆ ಬಂದ ರೀತಿಯಲ್ಲಿ ನೆರವೇರಿಸುವವನಾಗಿ ನಿಮಗೆ ಇಷ್ಟ ಭಾಗ್ಯವನ್ನು ಸಂಪಾದಿಸುವದಕ್ಕೆ ಸಾಮರ್ಥ್ಯವನ್ನು ಕೊಟ್ಟವನೆಂದು ಜ್ಞಾಪಕಮಾಡಿಕೊಳ್ಳಿರಿ. ನೀವು ನಿಮ್ಮ ದೇವರಾದ ಯೆಹೋವನನ್ನು ಮರೆತು ಇತರ ದೇವರುಗಳನ್ನು ಅವಲಂಬಿಸಿ ಪೂಜಿಸಿದರೆ ನೀವು ತಪ್ಪದೆ ನಾಶವಾಗಿ ಹೋಗುವಿರೆಂದು ನಿಮ್ಮನ್ನು ಈಗ ಖಂಡಿತವಾಗಿ ಎಚ್ಚರಿಸುತ್ತೇನೆ" (ಧರ್ಮೋ. 8:17–19).

VI **ದೇವರು ಅವರ ಮೇಲೆ ನೇಮಿಸಿದ ನಾಯಕತ್ವಕ್ಕೆ ವಿರುದ್ಧವಾಗಿ ನಿಂತರು** :– ದೇವರು ಇಸ್ರಾಯೇಲ್ಯರನ್ನು ಐಗುಪ್ತದ ದಾಸತ್ವದಿಂದ ಬಿಡಿಸಿದ ತರುವಾಯ ಮೋಶೆ ಆರೋನರನ್ನು ಅವರ ಮೇಲೆ ನಾಯಕರನ್ನಾಗಿ ನೇಮಿಸಿದನು ಆದರೆ ಇಸ್ರಾಯೇಲ ಜನರಾದರೋ ಅನೇಕ ಸಮಯಗಳಲ್ಲಿ ದೇವರ ನಾಯಕತ್ವಕ್ಕೆ ತಿರುಗಿ ಬಿದ್ದು ದೇವರನ್ನು, ಮೋಶೆಯನ್ನು ದು:ಖಪಡಿಸಿದರು. ಇದು ಇಂದಿನ ದೇವರ ಸಭೆಗೂ ಅನ್ವಯಿಸುವಂತದ್ದಾಗಿದೆ. ಅನೇಕ ಸಲ ಸಭೆಗಳಲ್ಲಿ ನಮ್ಮ ಮೇಲಿರುವ ನಾಯಕತ್ವಕ್ಕೆ ವಿರುದ್ಧವಾಗಿ ನಿಂತು ಸಭೆಗೆ ಸಮಸ್ಯೆಗಳನ್ನುಂಟು ಮಾಡುತ್ತೇವೆ ಇದನ್ನು ದೇವರು ಎಂದಿಗೂ ಸಹಿಸುವುದಿಲ್ಲ. ನಾಯಕತ್ವದ ಕುರಿತಾಗಿ ಕೆಲವು ವಿಚಾರಗಳನ್ನು ನಾವು ಕಲಿಯೋಣ.

1. ನಾಯಕತ್ವವು ದೇವರಿಂದಾಗಿದೆ.
2. ನಾಯಕತ್ವಕ್ಕೆ ಅಧೀನರಾಗುವದು ದೇವರ ಚಿತ್ತವಾಗಿದೆ.
3. ನಾಯಕತ್ವವು ಲೆಕ್ಕ ಒಪ್ಪಿಸುವಂತದ್ದಾಗಿದೆ.
4. ನಾಯಕತ್ವದ ಅಧೀನದಲ್ಲಿ ಹೋಗುವುದು ಒಬ್ಬ ವಿಶ್ವಾಸಿಗೆ ಆಶೀರ್ವಾದವಾಗಿದೆ.
5. ನಾಯಕತ್ವವನ್ನು ಅಸಡ್ಡೆ ಮಾಡಬಾರದು (ತಿರಸ್ಕರಿಸಬಾರದು).
6. ನಾಯಕರಿಗೆ ಗೌರವವನ್ನು ಕೊಡಬೇಕು
7. ನಾಯಕನಿಗೆ ಅಧೀನನಾಗಿರುವವನು ಭವಿಷ್ಯದಲ್ಲಿ ಉತ್ತಮ ನಾಯಕನಾಗುವನು.

**1) ನಾಯಕತ್ವವು ದೇವರಿಂದಾಗಿದೆ :–** "ಇದಲ್ಲದೆ ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ; ಆರೋನನು ಸಹ ದೇವರಿಂದಲೇ ನೇಮಿಸಲ್ಪಟ್ಟು ಆ ಗೌರವವನ್ನು ವಹಿಸಿಕೊಂಡನಲ್ಲಾ" (ಇಬ್ರಿ. 5:4).

"ಆ ಮೇಲೆ ನೀನು ಮಾಡಬೇಕಾದದ್ದನ್ನು ನಾನೇ ತಿಳಿಸುತ್ತೇನೆ; ನಾನು ಯಾವನನ್ನು ತೋರಿಸುತ್ತೇನೋ ಅವನನ್ನು ನೀನು ಅಭಿಷೇಕಿಸಬೇಕು ಎಂದನು" (1 ಸಮು. 16:3). ಅಪೋಸ್ತಲನಾಗಲಿ, ಸಭಾಪಾಲಕನಾಗಲಿ, ಸಭೆಯ ನಾಯಕನಾಗಲಿ, ಸಭೆಯ ಹಿರಿಯನಾಗಲಿ ಪ್ರತಿಯೊಂದು ನಾಯಕತ್ವವು ಕರ್ತನಿಂದ ಬಂದದ್ದಾಗಿದೆ. ದೇವರು ಇಸ್ರಾಯೇಲರ ಮೇಲೆ ಮೋಶೆಯನ್ನು ನಾಯಕನಾಗಿ ನೇಮಿಸಿದನು. ದೇವರು ಒಬ್ಬ ವ್ಯಕ್ತಿಯನ್ನು ಯಾವ ಸೇವೆಗೆ ಕರೆಯುತ್ತಾನೋ ಅದರ ಅಭಿಷೇಕವನ್ನು ಕೊಡುತ್ತಾನೆ ಮಾತ್ರವಲ್ಲದೆ ಆ ಸೇವೆ ನಡಿಸುವ ಜ್ಞಾನವನ್ನು ಕೊಡುತ್ತಾನೆ.

**2) ನಾಯಕತ್ವಕ್ಕೆ ಅಧೀನರಾಗುವುದು ದೇವರ ಚಿತ್ತವಾಗಿದೆ :–** "ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನನಾಗಿರಲಿ; ಯಾಕಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ; ಇರುವ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟವರು" (ರೋಮ. 13:1). ಇಸ್ರಾಯೇಲ್ ಜನರು ಮೋಶೆಗೆ ಅಧೀನರಾಗಿ ನಡೆಯುತ್ತಿದ್ದರು. ಇದೇ ಅವರ ಕುರಿತಾಗಿರುವ ದೇವರ ಚಿತ್ತವಾಗಿತ್ತು. ಅನೇಕ ವಿಶ್ವಾಸಿಗಳ ಯೋಚನೆ ಏನೆಂದರೆ ನಾವು ಯಾಕೆ ನಾಯಕರಿಗೆ ಅಧೀನರಾಗಿರಬೇಕು?. ಅಧೀನತೆಯು ಆಶೀರ್ವಾದವಾಗಿದೆ.

"ಜನರಲ್ಲಿ ಸೇರದವನು ಸ್ವೇಚ್ಛಾನುಸಾರ ನಡೆಯುತ್ತಾ ಸಮಸ್ತ ಸುಜ್ಞಾನಕ್ಕೂ ರೇಗುವನು" (ಜ್ಞಾನೋ.18:1).

**ಯಾವ ವಿಷಯದಲ್ಲಿ ನಾಯಕತ್ವಕ್ಕೆ ಅಧೀನರಾಗಿರಬೇಕು**

1) ನಾವು ತಪ್ಪಾದ ಸಂಗತಿಗಳನ್ನು ಮಾಡುವಾಗ ಅವರು ನಮ್ಮನ್ನು ತಿದ್ದಲು ಅವಕಾಶ ಮಾಡಿಕೊಡಬೇಕು.

2) ದುರ್ಬೋಧಕರ ವಿಷಯದಲ್ಲಿ ಅವರು ಎಚ್ಚರಿಸುವಾಗ ಅಧೀನರಾಗಿರಬೇಕು.

3) ನಾಯಕರು ನಮ್ಮನ್ನು ಆತ್ಮೀಕ ಶಿಸ್ತಿಗೆ ಒಳಪಡಿಸುವಾಗ ಒಪ್ಪಿಸಿಕೊಡಬೇಕು.

4) ನಾವು ತಪ್ಪಾದ ವ್ಯಕ್ತಿಗಳೊಂದಿಗೆ ಹೋಗುವಾಗ ಆತ್ಮೀಕ

ನಾಯಕರು ನಮ್ಮನ್ನು ಎಚ್ಚರಿಸುವಾಗ ಒಪ್ಪಿಸಿಕೊಡಬೇಕು.

5) ನಾವು ಆರಾಧನೆಗೆ ಬರದಿದ್ದರೆ ಪ್ರಾರ್ಥನೆ, ವಾಕ್ಯಧ್ಯಾನ, ಕುಟುಂಬ ಪ್ರಾರ್ಥನೆ, ಸತ್ಯವೇದ ಅಧ್ಯಾಯನ ಇತ್ಯಾದಿ ಆತ್ಮೀಕ ಅಭ್ಯಾಸಗಳಲ್ಲಿ ಪಾಲುಗಾರರಾಗಿರದೇ ಹೋಗುವಾಗ ಎಚ್ಚರಿಸಿದರೆ ಕಿವಿಗೊಡಬೇಕು.

6) ನಮ್ಮ ಜೀವಿತದ ನಡೆಗಳು ತಪ್ಪಾಗಿ ಹೋಗುವಾಗ ಆತ್ಮೀಕ ನಾಯಕರು ಎಚ್ಚರಿಸುವಾಗ ಒಪ್ಪಿಸಿಕೊಡಬೇಕು.

7) ನಮ್ಮ ಮೇಲಿರುವ ನಾಯಕತ್ವವು ಒಪ್ಪಿಸಿದ ಜವಾಬ್ದಾರಿಯನ್ನು ನಂಬಿಗಸ್ತಿಕೆಯಿಂದ ಮಾಡುವವರಾಗಿರಬೇಕು.

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

## ಕವನಗಳು

ನಿನ್ನ ಮಧುರ ನುಡಿಗೆ
ವಿಧೇಯಳಾದೆನು.
ನಿನ್ನ ಅಮರ ಪ್ರೇಮಕ್ಕೆ
ಶರಣಾದೆನು.
ನಿನ್ನ ಕಾರ್ಯವೈಖರಿಗೆ
ಸ್ತಬ್ಧಳಾದೆನು.

ಯೇಸುವಿನ ಪಾದದಲ್ಲಿ ಕುಳಿತು
ನಿನ್ನ ರಕ್ಕೆಗಳಡಿಯಲ್ಲಿ ಅವಿತು
ಹರ್ಷಿಸಿ ನಲಿಯುವೆನು
ಎಲ್ಲಾ ಕಷ್ಟಗಳನ್ನು ಮರೆತು.


ನಿನ್ ಕೈ ಹಿಡಿದಿರುವೆ
ನಿನ್ನನ್ನೇ ನೋಡುತ್ತಿರುವೆ
ನಿನ್ನಲ್ಲೇ ಅಂಗಲಾಚಿ ಬೇಡುವೆ
ಯಾಕೆಂದ್ರೆ ನಿನ್ನ ಬಿಟ್ರೆ ನನಗ್ಯಾರು ಇಲ್ವೆ!

ಸಹೋ ॥ ದೀಪ್ತಿ, ಮಂಗಲ.




## ನಮ್ಮೊಂದಿಗೆ ಆಚರಿಸಿ





**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

## ಮಕ್ಕಳ ಸ್ವರ

1) ಸಂಸೋನನು ಯಾರನ್ನು ಮದುವೆಯಾದನು? (ನ್ಯಾಯ. 14:18).

2) ಸೌಲನ ಹೆಂಡತಿಯ ಹೆಸರೇನು? (1 ಸಮು. 14:49–50).

3) ಜೆಬೆದಾಯನ ಹೆಂಡತಿಯ ಹೆಸರೇನು? (ಮತ್ತಾ. 4:21, 27:56).

4) ಯಾರಿಗೆ ನೂರು ವರ್ಷ ಪ್ರಾಯವಾದಾಗ ಮಗು ಜನಿಸಿತು? (ಆದಿ. 21:5).

5) ಯಾವ ಸ್ಥಳದಿಂದ ಆಮೋಸ ಪ್ರವಾದಿಯು ಬಂದನು? (ಆಮೋ. 1:5).

6) ಬೇತೇಲ್ ಅಂದರೆ ಏನು? (ಆದಿ. 28:19).

7) ಯಾರು ಸಿಂಹದೊಂದಿಗೆ ಹೋರಾಡಿದನು? (ನ್ಯಾಯ. 14:6).

8) ಎಲ್ಲಿಗೆ ಹೋಗಬೇಕಾದ ಯೋನನು ತಾರ್ಷೀಷಿಗೆ ಹೋದನು? (ಯೋನ. 1:5).

9) ____________ ಮರದ ಹಾಗೆ ದೃಢವಾಗಿ ಇದ್ದರು (ಆಮೋ. 2:9).

10) ಇಸ್ರಾಯೇಲಿನ ______________ ಬೀಡುಬೀಳುವವು (ಆಮೋ. 7:9).

**ಜೂನ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :–**

1. ಒರ್ಫಳು (ರೂತ. 1:14).
2. ಲೋಟನ ಹೆಂಡತಿ (ಆದಿ. 19:6).
3. ಹಾಗರಳು (ಆದಿ. 16:15).
4. ಗೋಮೆರಳು (ಹೋಶೆ. 1:3).
5. ಸಾವಿರ ಜನರನ್ನು (ನ್ಯಾಯ. 15:16).
6. ನೀತಿಯುಳ್ಳವುಗಳು (ಕೀರ್ತ. 145:17).
7. ಕೀರ್ತಿಸು (ಕೀರ್ತ. 147:12).
8. ಸೌಭಾಗ್ಯವನ್ನು (ಕೀರ್ತ. 147:14).
9. ಆನೆಕಲ್ಲುಗಳನ್ನು (ಕೀರ್ತ. 147:17).
10. ಘನದ ಕೊಂಬನ್ನು (ಕೀರ್ತ. 148:14).

## ಬೇಕಾಗಿದ್ದಾರೆ

- **ಸ್ಟಾಫ್ ನರ್ಸ್ (ಜಿಎನ್ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)**
- **ಎಮ್ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**0091 9902334941, 0091 820 2002781.**

ನೀನು ನನಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು (ಕೀರ್ತ. 63:7).